ISSN : 3048-7137

# ಆರಯ್

## ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು (Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨ ಸಂಚಿಕೆ–೩

ಜುಲೈ-ಸೆಪ್ಟೆಂಬರ್ ೨೦೨೫

Kannada Online Double Blind Peer-Review Quarterly Research Journal

Volume-2, Number-3 July-September 2025

ಕಟ್ಟುಗ

**ಬಸವರಾಜ ಕೋಡಗುಂಟಿ**

ಬಂಡಾರ ಪ್ರಕಾಶನ
ಮಸ್ಕಿ

**ಆರಯ್**

ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು (Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨, ಸಂಚಿಕೆ–೩, ಜುಲೈ–ಸೆಪ್ಟೆಂಬರ್ ೨೦೨೫

ISSN : 3048-7137

**ARAY**

Kannada Online Double Blind Peer-Review Quarterly Research Journal

Volume-2, Number-3, July-September 2025

https://aray.in/

ಪುಟ/Pages : 130

ಹಕ್ಕು/@: ಪ್ರಕಾಶಕರು

ಬೆಲೆ/Price : **ರೂ. 50/–**

ಸಂಪಾದಕ

**ಪ್ರೊ. ಬಸವರಾಜ ಕೋಡಗುಂಟಿ**

ಅತಿಥಿ ಸಂಪಾದಕ

**ಪ್ರೊ. ಕೆ. ಶಾರದಾ**

ಸಲಹಾ ಮಂಡಳಿ

**ಪ್ರೊ. ಪುರುಷೋತ್ತಮ ಬಿಳಿಮಲೆ, ಪ್ರೊ. ನಟರಾಜ್ ಬೂದಾಳ್**

**ಪ್ರೊ. ಸತ್ಯನಾಥ್ ಟಿ.ಎಸ್. ಪ್ರೊ. ಶ್ರೀನಿವಾಸ ವಿ. ಪಾಡಿಗಾರ, ಪ್ರೊ. ಶ್ರೀಧರ್ ಎಸ್.ಎನ್.**

ಸಂಪಾದಕ ಮಂಡಳಿ

**ಪ್ರೊ. ಚೈತ್ರಾ ಪುಟ್ಟಸ್ವಾಮಿ, ಪ್ರೊ. ಮನು ವಿ ದೇವದೇವನ್**

**ಪ್ರೊ. ಗಿಲ್ ಬೆನ್–ಹೆರುತ್, ಪ್ರೊ. ತಾರಕೇಶ್ವರ್ ವಿ.ಬಿ., ಪ್ರೊ. ಪರಮಶಿವಮೂರ್ತಿ ಡಿ.ವಿ.**

ಕಾರ್ಯಕಾರಿ ಮಂಡಳಿ

**ಡಾ. ಮಲ್ಲೇಶಪ್ಪ ಸಿದ್ರಾಂಪುರ, ಡಾ. ರಾಮಕೃಷ್ಣ ಜಿ, ಡಾ. ಮಹಾಂತೇಶ ಪಾಟೀಲ್**

**ಡಾ. ಬಸಯ್ಯ ಸ್ವಾಮಿ, ಡಾ. ಮಧು ಬಿರಾದಾರ್, ಶ್ರೀ ರೇಣುಕಾ ಕೊಡಗುಂಟಿ**

ಪ್ರಕಾಶಕರು

**ಪರಶುರಾಮ ಕೋಡಗುಂಟಿ**

ಪ್ರಕಾಶಕ, ಬಂಡಾರ ಪ್ರಕಾಶನ

ಮಸ್ಕಿ–೫೮೪ ೧೨೪, ಜಿ. ರಾಯಚೂರು

ಕರೆ–೯೧ ೯೮೮೬೪ ೦೭೦೧೧

bandaraprakashana@gmail.com

https://bandaraprakashana.com

# ಪ ರಿ ವಿ ಡಿ


| | |
|---|---|
| ಜಾನಪದ ರಂಗಭೂಮಿಯಲ್ಲಿ ಮಹಿಳೆಯರ ಪಾತ್ರ<br>**ಗಂಗಾಧರ ದೈವಜ್ಞ** | 4-25 |
| ಕೇಳಿಕೆ ರಂಗಭೂಮಿ ಹಿನ್ನೆಲೆಯಲ್ಲಿ ಗಡಿಪ್ರದೇಶದ ಜನಪದ ರಂಗಪ್ರಕಾರಗಳು ಮತ್ತು ದ್ರಾವಿಡ ರಂಗಭೂಮಿಯ ಪರಿಕಲ್ಪನೆ<br>**ವೇಮಗಲ್ ನಾರಾಯಣಸ್ವಾಮಿ** | 26-49 |
| ಬಯಲಾಟದಲ್ಲಿ ಬಹು ಭಾಷಾ ಬಳಕೆ<br>**ಹೆಚ್.ಡಿ.ನರಸೇಗೌಡ** | 50-67 |
| ಬಯಲಾಟ ಕಲಾವಿದ ಜಡೆ ದೊಡ್ಡಬಸಪ್ಪ<br>**ಗಾದೆಪ್ಪ** | 68-78 |
| ಬಯಲಾಟಗಳಲ್ಲಿ ದ್ವಿ ಭಾಷಿಕತೆ<br>**ಇಮಾಮ್‌ಸಾಬ ಹಡಗಲಿ** | 79-87 |
| ಕನ್ನಡ ಬಯಲಾಟ ಪರಿಸರ ಮತ್ತು ಪ್ರೇರಣೆ<br>**ಹುಲುಗಪ್ಪ ಎನ್.ಎಚ್** | 88-99 |
| ತೊಗಲು ಗೊಂಬೆ ಆಟ<br>**ರುದ್ರಮುನಿ ಹೀರೆಮಠ** | 100-117 |
| ಕೋಲಾರ ಜಿಲ್ಲೆಯ ಕೇಳಿಕೆಗಳ ವೈಶಿಷ್ಟ್ಯತೆ<br>**ನಟರಾಜ ಬಿ.ಎನ್.** | 118-130 |

ISSN : 3048-7137

# ಕೇಳಿಕೆ ರಂಗಭೂಮಿ ಹಿನ್ನೆಲೆಯಲ್ಲಿ ಗಡಿಪ್ರದೇಶದ ಜನಪದ ರಂಗಪ್ರಕಾರಗಳು ಮತ್ತು ದ್ರಾವಿಡ ರಂಗಭೂಮಿಯ ಪರಿಕಲ್ಪನೆ

**ವೇಮಗಲ್ ನಾರಾಯಣಸ್ವಾಮಿ**

**ಸೂಚಕ ಪದಗಳು**

ಜನಪದ ರಂಗಭೂಮಿ, ದ್ರಾವಿಡ ಸಂಪ್ರದಾಯ, ಕೇಳಿಕೆ ರಂಗಭೂಮಿ, ಸಾಂಸ್ಕೃತಿಕ ಬಾಂಧವ್ಯ, ಲೌಕಿಕೀಕರಣ

**ಸಾರಲೇಖ**: ಕರ್ನಾಟಕವು ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳ ರಾಜ್ಯಗಳೊಂದಿಗೆ ಗಡಿಯನ್ನು ಹಂಚಿಕೊಂಡಿದೆ. ಈ ಗಡಿಭಾಗಗಳಲ್ಲಿ ಜನರ ಸಾಂಸ್ಕೃತಿಕ, ಭಾಷಿಕ ಮತ್ತು ಸಾಮಾಜಿಕ ಬಾಂಧವ್ಯಗಳು ಅತ್ಯಂತ ಆಳವಾಗಿವೆ. ಈ ಪರಸ್ಪರ ಸಂಸ್ಕೃತಿಯ ಸಂವಹನದಿಂದ ವಿವಿಧ ಜನಪದ ರಂಗಪ್ರಕಾರಗಳು ಬೆಳವಣಿಗೆಯಾದವು. ಮರಾಠಿಯ ತಮಾಷೆಯ ಪ್ರಭಾವದಿಂದ ಕನ್ನಡದ ಸಣ್ಣಾಟ ಹುಟ್ಟಿಕೊಂಡರೆ, ಕೇರಳದ ಕಥಕ್ಕಳಿ ಮತ್ತು ಕರ್ನಾಟಕದ ಯಕ್ಷಗಾನದಲ್ಲಿ ಸಮಾನ ಅಂಶಗಳು ಕಂಡುಬರುತ್ತವೆ. ತಮಿಳುನಾಡಿನ ತೆರಕೂತ್ತು ಮತ್ತು ಕನ್ನಡದ ಬಯಲಾಟ ಪರಸ್ಪರ ಹೋಲಿಕೆಯಾದರೂ ನೇರ ಪ್ರಭಾವ ಕಡಿಮೆ. ಆದರೆ ಆಂಧ್ರ ಮತ್ತು ಕರ್ನಾಟಕದ ಗಡಿಯು ವಿಶೇಷವಾದ 'ಕೇಳಿಕೆ ರಂಗಭೂಮಿ'ಯ ಜನ್ಮಭೂಮಿಯಾಗಿದೆ. ಕೇಳಿಕೆ, ಆಂಧ್ರದ ಬುರ್ರಕಥಾ

ಮತ್ತು ಕರ್ನಾಟಕದ ಮೂಡಲಪಾಯ ಯಕ್ಷಗಾನದ ಸಂಯೋಜಿತ ರೂಪವಾಗಿ ಕಂಡುಬರುತ್ತದೆ. ಈ ಕಲೆಯಲ್ಲಿ ಕಥನ, ನೃತ್ಯ, ಸಂಗೀತ ಮತ್ತು ನಾಟಕೀಯತೆಯ ಅಂಶಗಳು ಒಟ್ಟುಗೂಡಿವೆ. ಇದು ದ್ರಾವಿಡ ರಂಗಭೂಮಿಯ ಪ್ರಾಚೀನ ಸಂಪ್ರದಾಯಗಳ ಮುಂದುವರಿಕೆಯಾಗಿ ಮತ್ತು ಲೌಕಿಕ ಜನಪದ ರಂಗಭೂಮಿಯ ಪರಿವರ್ತಿತ ರೂಪವಾಗಿ ಪರಿಗಣಿಸಬಹುದು.

## ಪೀಠಿಕೆ

ಕರ್ನಾಟಕ ತನ್ನ ಸುತ್ತ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ರಾಜ್ಯಗಳ ಗಡಿಗಳನ್ನು ಹೊಂದಿದೆ. ಮಹಾರಾಷ್ಟ್ರ ರಾಜ್ಯದ ಗಡಿಯು ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳನ್ನು ಹೊಂದಿದ್ದರೆ ಆಂಧ್ರದ ಗಡಿಯು ಗುಲ್ಬರ್ಗಾ, ಬೀದರ್, ಬಳ್ಳಾರಿ, ಚಿತ್ರದುರ್ಗ, ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳನ್ನು ಒಳಗೊಂಡಿದೆ. ತಮಿಳುನಾಡಿನ ಗಡಿಯು ಬೆಂಗಳೂರು ಮತ್ತು ಮೈಸೂರು, ಚಾಮರಾಜನಗರ ಜಿಲ್ಲೆಗಳನ್ನು ಒಳಗೊಂಡಿದೆ. ಕೇರಳ ಗಡಿಯು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಒಳಗೊಂಡಿದೆ. ಇಷ್ಟು ವಿಶಾಲ ಗಡಿ ಪ್ರದೇಶವನ್ನು ಹೊಂದಿರುವ ಕರ್ನಾಟಕವು ಬಹು ಹಿಂದಿನಿಂದಲೂ ಈ ಎಲ್ಲಾ ರಾಜ್ಯಗಳ ಭಾಷೆ ಮತ್ತು ಸಂಸ್ಕೃತಿಯೊಂದಿಗೆ ತನ್ನದೇ ಆದ ಸಂಬಂಧಗಳನ್ನು ಇರಿಸಿಕೊಂಡು ಮುನ್ನಡೆಯುತ್ತಾ ಬಂದಿದೆ. ಕೇವಲ ಭಾಷೆ ಮತ್ತು ಸಂಸ್ಕೃತಿಯ ಕೊಳು–ಕೊಡಗೆಳಲ್ಲದೆ ಆರ್ಥಿಕ, ಸಾಮಾಜಿಕ ಮತ್ತು ಕೌಟುಂಬಿಕ ಸಂಬಂಧಗಳನ್ನು ಕೂಡ ನಾವು ದಟ್ಟವಾಗಿ ಗುರುತಿಸಬಹುದು. ಭಾರತಕ್ಕೆ ಸ್ವಾತಂತ್ರ್ಯ ಬಂದು ಭಾಷಾವಾರು ರಾಜ್ಯಗಳು ವಿಂಗಡಣೆಯಾದ ಮೇಲೆ ನಾವು ರಾಜ್ಯಗಳ ಸಂಬಂಧಾಂತರವನ್ನು ಗಡಿಗಳ ಮೂಲಕ ಗುರುತಿಸುತ್ತಿದ್ದೇವೆ. ಬಹುಶಃ ಈ ವಿಂಗಡಣೆ ಆಗುವುದಕ್ಕಿಂತ ಮೊದಲು ಆಯಾ ಪ್ರದೇಶಗಳಲ್ಲಿ ಭಾಷೆಗಳು ಬದಲಾಗುವ ಮೂಲಕ ನಾವು ಭಿನ್ನತೆಯನ್ನು ಕಾಣುತ್ತಿದ್ದೇವೆ ಹೊರತು ಉಳಿದ ವಿಚಾರಗಳಲ್ಲಿ ಸರಿಸಮನಾದ ಅಂಶಗಳೇ ಗಡಿಗಳಲ್ಲಿ ಗೋಚರವಾಗುತ್ತಿದ್ದವು ಎಂಬುದರಲ್ಲಿ ಅನುಮಾನವೇನಿಲ್ಲ.

## ಅ. ಮರಾಠಿ ಮತ್ತು ಕನ್ನಡ ಗಡಿ ಪ್ರದೇಶದ ರಂಗಭೂಮಿ

ಮರಾಠಿ ಸಂಸ್ಕೃತಿ ಮತ್ತು ಕನ್ನಡ ಸಂಸ್ಕೃತಿಗಳ ಸಾಂಸ್ಕೃತಿಕ ಬಾಂಧವ್ಯ ಅತ್ಯಂತ ಪ್ರಾಚೀನವಾದುದು. ಡಾ. ಶಂಬಾ ಜೋಶಿಯವರು ಗುರುತಿಸುವ ಪ್ರಕಾರ ಕನ್ನಡದ ಗಡಿಯು ನರ್ಮದ ನದಿಯವರೆಗೆ ಇತ್ತು. ಕವಿರಾಜಮಾರ್ಗದ ನೃಪತುಂಗ ಕೂಡ

“ಕಾವೇರಿಯಿಂದ ಗೋದಾವರಿ ವರಮಿರ್ದನಾಡದು ಕನ್ನಡದೊಳ್” ಎಂದು ಹೇಳುವ ಮೂಲಕ ಗೋದಾವರಿಯವರೆಗೆ ಕನ್ನಡದ ಎಲ್ಲೆ ಇತ್ತು ಎಂದು ಗುರುತಿಸುತ್ತಾನೆ. ಅದೇನೆ ಇರಲಿ ಕನ್ನಡ ಮತ್ತು ಮರಾಠಿ ಸಾಂಸ್ಕೃತಿಕ ಬಾಂಧವ್ಯವನ್ನು ಡಾ. ಶಂಬಾ ಜೋಶಿಯವರು ತಮ್ಮ ಅನೇಕ ಕೃತಿಗಳ ಮೂಲಕ ನಿರೂಪಿಸಿದ್ದಾರೆ.

ರಂಗಭೂಮಿಯ ದೃಷ್ಟಿಯಿಂದ ನೋಡುವುದಾದರೆ ಕನ್ನಡ ಮತ್ತು ಮರಾಠಿಯ ಸಂಬಂಧಗಳು ಬೇರೆಡೆಗಿಂತ ಅಧಿಕವಾಗಿವೆ ಎಂದೇ ಹೇಳಬಹುದು. ಜ್ಞಾನದೇವನ ಬರಹಕ್ಕೆ ಕನ್ನಡದ ಪ್ರೇರಣೆ ಇದೆ ಎಂಬುದು ಒಂದು ಅಭಿಪ್ರಾಯವಾದರೆ ನಾಮದೇವನ ಬರಹಕ್ಕೂ ಕನ್ನಡದ ವಚನ ಚಳುವಳಿ ಪ್ರೇರಣೆ ನೀಡಿತು ಎಂದು ಹೇಳಲಾಗಿದೆ. ಹಾಗೆ ನೋಡಿದರೆ ಕನ್ನಡ ರಂಗಭೂಮಿಯು ಮರಾಠಿಯ ಮೇಲೆ ಪ್ರಭಾವ ಬೀರಿದ್ದಕ್ಕಿಂತ ಮರಾಠಿಯಿಂದ ಕನ್ನಡದ ಮೇಲೆ ಆದ ಪ್ರಭಾವ ಹೆಚ್ಚು ಎಂದೇ ಹೇಳಬಹುದು. ಕನ್ನಡ ರಂಗಭೂಮಿಗೆ ಹೊಸ ಅಲೆಯನ್ನು ಉಂಟುಮಾಡಿದ ಹಾಗೂ ಅನೇಕ ಹೊಸ ಪ್ರಯೋಗಗಳಿಗೆ ಕಾರಣವಾದ ಸಣ್ಣಾಟಗಳಿಗೆ ಮರಾಠಿ ರಂಗಭೂಮಿಯ ತಮಾಷೆ ಹೆಚ್ಚು ಪ್ರಭಾವವನ್ನು ಬೀರಿತು. ತಮಾಷದ ಪ್ರಭಾವದಿಂದ ಸಾಮಾಜಿಕ ವಸ್ತು ವಿಶೇಷಗಳನ್ನು ಇಟ್ಟುಕೊಂಡು ಹೊಸ ರೂಪದಲ್ಲಿ ಆವಿರ್ಭವಿಸಿದ ನಮ್ಮ ಸಣ್ಣಾಟಗಳು ಕನ್ನಡದ ಜಾಯಮಾನವನ್ನು ದಕ್ಕಿಸಿಕೊಂಡು ಜನಪ್ರಿಯವಾದವು. ಹಾಗೆಯೇ ನಮ್ಮ ದಾಸರಾಟ ಮತ್ತು ರಾಧಾನಾಟಗಳು ಹಾಗೂ ಕೃಷ್ಣ ಪಾರಿಜಾತ ಮಹಾರಾಷ್ಟ್ರದಲ್ಲಿ ಹುಟ್ಟಿದ ವೈಷ್ಣವ ಆರಾಧನೆಯ ಭಕ್ತಿ ಪಂಥಗಳಿಂದ ನೇರ ಪ್ರಭಾವವನ್ನು ಪಡೆದವು. ಇದು ಒಂದು ಮುಖವಾದರೆ, ಕನ್ನಡದ ಗೀತ ಸಂಪ್ರದಾಯಗಳೆನಿಸಿದ ಚೌಡಿಕೆ, ಗೀಗೀ ಮತ್ತು ಹರದೇಶಿ ನಾಗೇಶಿ ಪಂಥಗಳು ಮರಾಠಿ ರಂಗಭೂಮಿಯ ಮೇಲೆ ಅಪಾರವಾದ ಪ್ರಭಾವ ಬೀರಿರುವುದನ್ನು ನಾವು ಕಾಣಬಹುದು. ಕನ್ನಡ ನೆಲದ ಮೈಲಾರಲಿಂಗ, ಖಂಡೋಬ, ಎಲ್ಲಮ್ಮ ಮುಂತಾದ ದೇವತೆಯರು ಮರಾಠಿ ಗಡಿಭಾಗದ ಸಂಸ್ಕೃತಿಯ ಮೇಲೆ ಸತತವಾದ ಪ್ರಭಾವ ಬೀರುತ್ತಲೆ ಬಂದಿವೆ.

ಈ ಮೇಲೆ ಕಾಣಿಸಿದ ಪರಸ್ಪರ ಕೊಳು ಕೊಡುಗೆಗಳ ಸಂಬಂಧಗಳು ನಿಚ್ಚಳವಾಗಿ ಕಾಣಿಸಿದರೂ ರಂಗಭೂಮಿ ಸಂಬಂಧದಲ್ಲಿ ಮರಾಠಿ ಪ್ರದೇಶದಿಂದ ಆದ ಪ್ರಭಾವವೇ ಹೆಚ್ಚಾಗಿರುವುದರಿಂದ ಈ ಸಣ್ಣಾಟಗಳ ಮೂಲಕ ದ್ರಾವಿಡ ರಂಗಭೂಮಿಯ ಕಲ್ಪನೆಗೆ ಸಮಂಜಸವಾದ ಆಧಾರಗಳನ್ನು ಬಳಸಿಕೊಳ್ಳಲು

ಸಾಧ್ಯವಾಗುವುದಿಲ್ಲ. ಸಣ್ಣಾಟವೆಂಬುದು ಅನ್ಯಭಾಷೆಯ, ಅದರಲ್ಲೂ ದ್ರಾವಿಡ ವಲ್ಲದ ಭಾಷೆಯ ಸಂಪರ್ಕದಿಂದ ಸೃಷ್ಟಿಯಾದ ಕಲಾ ಪ್ರಕಾರವಾದ್ದರಿಂದ ದ್ರಾವಿಡ ರಂಗಭೂಮಿ ಚೌಕಟ್ಟಿನಿಂದ ಈ ಪ್ರಕಾರ ಆಚೆಯೇ ನಿಲ್ಲುತ್ತದೆ ಎಂದು ಹೇಳಬಹುದು.

ಆದರೆ ತೊಗಲು ಗೊಂಬೆ ಕಲಾ ಪ್ರಕಾರ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ವಲಸೆ ಬಂದಿದೆ ಎಂಬುದನ್ನು ನೋಡುವಾಗ ಕರ್ನಾಟಕದಲ್ಲಿ ಅದು ಸಣ್ಣಾಟ ಗಳಿಗಿಂತ ಭಿನ್ನವಾಗಿ ಅಸ್ತಿತ್ವದಲ್ಲಿರುವುದನ್ನು ಕಾಣಬಹುದು. ಕರ್ನಾಟಕದಲ್ಲಿ ತೊಗಲು ಗೊಂಬೆಯನ್ನು ಪ್ರದರ್ಶಿಸುತ್ತಿರುವ ಕಿಳ್ಳೇಕ್ಯಾತರು ಮತ್ತು ಗೊಂಬೆ ರಾಮರು ಮರಾಠಿಯನ್ನು ಮಾತೃಭಾಷೆಯನ್ನಾಗಿ ಪಡೆದವರು. ಪೇಶ್ವೆಗಳ ಆಡಳಿತ ಕಾಲದಲ್ಲಿ ಅವರ ಮೇಲೆ ಸಾಂಸ್ಕೃತಿಕ ದಾಳಿಗಳು ನಡೆದಾಗ ಮತ್ತು ಅವರ ಕಲೆಯನ್ನು ನಿಷೇಧಿಸಿದಾಗ ಅವರೆಲ್ಲರು ಕರ್ನಾಟಕದ ಕಡೆ ವಲಸೆ ಬಂದರೆಂದು ಹೇಳಲಾಗುತ್ತಿದೆ. ಹಾಗೇ ಬಂದ ಕಿಳ್ಳೇಕ್ಯಾತರು ಸಂಪೂರ್ಣವಾಗಿ ದ್ರಾವಿಡ ರಂಗಭೂಮಿ ಚೌಕಟ್ಟಿನ ಯಕ್ಷಗಾನ ಬಯಲಾಟ, ಸಂಪ್ರದಾಯಗಳನ್ನು ಅನುಸರಿಸಿದ್ದು ಮತ್ತು ಕನ್ನಡದಲ್ಲಿ ಪೌರಾಣಿಕ ಪಾಂಡಿತ್ಯವನ್ನು ಪಡೆದಿದ್ದು ಮೆಚ್ಚುಗೆಯ ಸಂಗತಿಯಾಗಿ ನಮಗೆ ಕಾಣುತ್ತದೆ. ಬಹುಶಃ ಡಾ. ಶಂಬಾ ಜೋಶಿ ಯವರ ಸಂಶೋಧನೆಯ ಹಿನ್ನೆಲೆಯಲ್ಲಿ ಹೇಳುವುದಾದರೆ ನರ್ಮದೆಯವರೆಗಿದ್ದ ಕನ್ನಡ ನೆಲದ ದ್ರಾವಿಡ ಸಂಪ್ರದಾಯದ ಪರಿಧಿಯಲ್ಲೇ ಈ ತೊಗಲುಗೊಂಬೆ ಕಲೆಯಿತ್ತೆ ಎಂಬುದನ್ನು ಯೋಚಿಸಬೇಕಾಗಿದೆ.

## ಆ. ಮಲೆಯಾಳಿ ಮತ್ತು ಕನ್ನಡ ಗಡಿ ಪ್ರದೇಶದ ರಂಗಭೂಮಿ

ಮಲೆಯಾಳಿ ಮತ್ತು ಕನ್ನಡ ಬಾಂಧವ್ಯ ಎಂಬ ಪದವನ್ನು ಬಳಸುವುದಕ್ಕಿಂತ ಮಲೆಯಾಳಿ ಮತ್ತು ತುಳು ಬಾಂಧವ್ಯ ಪದ ಬಳಸುವುದೇ ಒಳ್ಳೆಯದು ಎನಿಸುತ್ತದೆ. ಕನ್ನಡದ ಉಪ ಭಾಷೆಯೂ ದ್ರಾವಿಡ ಮೂಲದ ಭಾಷೆಯೂ ಆದ ತುಳು ಕನ್ನಡದ ಹಾಗೆಯೇ ಮಲೆಯಾಳದ ಜೊತೆಗೂ ಸಂಬಂಧ ಇರಿಸಿಕೊಂಡಿದೆ. ಈ ತುಳುಪ್ರದೇಶ ಮತ್ತು ಮಲೆಯಾಳಿ ಭಾಷಾ ಪ್ರದೇಶಗಳ ನಡುವೆ ಬೆಳೆದು ಬಂದಿರುವ ಸಾಂಸ್ಕೃತಿಕ ಬಾಂಧವ್ಯ ಕೂಡ ಅತ್ಯಂತ ಪ್ರಾಚೀನವಾದುದು. ಕೇರಳ ಸಂಸ್ಕೃತಿಯಲ್ಲಿ ಅದ್ವಿತೀಯ ಕಲೆಯಾಗಿ ಬೆಳೆದಿರುವ ಕಥಕ್ಕಳಿಗೂ ನಮ್ಮ ಕರಾವಳಿಯ ಯಕ್ಷಗಾನಕ್ಕೂ ಯಾವ ರೀತಿಯ ಸಂಬಂಧವಿದೆ ಎನ್ನುವುದನ್ನು ನಾವು ಅರಿಯಬೇಕು. ದಕ್ಷಿಣ ಕನ್ನಡ ಮತ್ತು ಕೇರಳದಾದ್ಯಂತ

ISSN : 3048-7137

ಇರುವ ಭೂತಾರಾಧನೆ ಸಂಪ್ರದಾಯವನ್ನು ಗಮನಿಸಿದಾಗ ಈ ಎರಡು ರಾಜ್ಯಗಳ ನಡುವೆ ಸಮಾನವಾದ ಆರಾಧನೆ ಮತ್ತು ಆಚರಣೆಗಳು ಇದ್ದದ್ದು ಸ್ಪಷ್ಟವಾಗುತ್ತಿದೆ. ಹಾಗೆಯೇ ಕಥಕ್ಕಳಿ, ತೆಯ್ಯಂ ಪ್ರಕಾರಗಳಲ್ಲಿ ಬರುವ ವೇಷ, ಮುಖವರ್ಣಿಕೆ, ಆರಾಧನ ಸ್ವರೂಪ ಇವುಗಳಿಗೂ ಭೂತಾರಾಧನೆಯ ಮುಖವರ್ಣಿಕೆ ಮತ್ತು ಆರಾಧನ ಸ್ವರೂಪಕ್ಕೂ ಹತ್ತಿರದ ಸಂಬಂಧವಿದೆ. ಯಕ್ಷಗಾನಗಳಲ್ಲಿ ಸೃಷ್ಟಿಸಲಾಗಿರುವ ಅದ್ವಿತೀಯವಾದ ಬಣ್ಣದ ವೇಷಗಳಿಗೂ ಕಥಕ್ಕಳಿಯ ವೇಷಗಳಿಗೂ ಸಮಾನವಾದ ಅಂಶಗಳು ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಮತ್ತು ಕೇರಳ ಗಡಿ ಪ್ರದೇಶಗಳ ಯಕ್ಷಗಾನ, ಭೂತಾರಾಧನೆ, ತೆಯ್ಯಂ ಮತ್ತು ಕಥಕ್ಕಳಿಯ ಸಮಾನ ಅಂಶಗಳು ಮೂಲದಲ್ಲಿ ಇದ್ದಿರಬಹುದಾದ ದ್ರಾವಿಡ ರಂಗಭೂಮಿಯ ಅಸ್ತಿತ್ವವೊಂದರ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತವೆ. ಅದರಲ್ಲಿಯೂ ಕೇರಳದ ಕಾಸರಗೋಡು ಜಿಲ್ಲೆ ಸಂಪೂರ್ಣವಾಗಿ ತುಳುಮಯವಾಗಿದ್ದು ಕರ್ನಾಟಕ ಮತ್ತು ಕೇರಳ ಸಂಸ್ಕೃತಿಗಳ ಸಮ್ಮಿಲನಗೊಂಡ ವಿಶಿಷ್ಟ ಪ್ರದೇಶವಾಗಿ ಕಾಣಿಸಿಕೊಳ್ಳುತ್ತದೆ.

ಕೇರಳದಲ್ಲಿ ಚಾಕ್ಯಾರ್ ಎಂಬ ಜಾತಿ ಬಯಲಾಟಗಳನ್ನಾಡುವ ವೃತ್ತಿಯನ್ನೇ ಹೊಂದಿದ್ದ ಸಂಗತಿಗಳು ತಿಳಿದುಬರುತ್ತದೆ. ಚಾಕ್ಯಾರ್ ಕೂತ್ತು ಕೇರಳ ಪ್ರಾದೇಶಿಕ ರಂಗ ಕಲೆಯಲ್ಲಿ ಈ ದೃಷ್ಟಿಯಿಂದ ಉಲ್ಲೇಖನೀಯವಾಗುತ್ತದೆ. ಈ ಆಟಗಳು ಧಾರ್ಮಿಕ ವಸ್ತು ಸಂಗತಿಗಳನ್ನೇ ಒಳಗೊಂಡು ಮೊದಮೊದಲು ದೇವಾಲಯದ ಆವರಣದಲ್ಲಿ ಪ್ರದರ್ಶನಗೊಳ್ಳುತ್ತಿದ್ದವು. ಆಟದ ಸ್ಥಳಕ್ಕೆ 'ಕೊಟ್ಟಂಬಲಮ್' (ಕೂಟ್ಟು–ಆಟ; ಅಂಬಲಮ್–ಬಯಲಲ್ಲಿ ಜನ ಸೇರುವ ಒಂದು ಸ್ಥಳ ಅಥವಾ ಚಾವಡಿ), ಚಾಕ್ಕಾರ್ ಕೂತ್ತನ್ನು ಆಡಲು ಮೂವರು ಮುಖ್ಯರಾಗುತ್ತಾರೆ. ಒಬ್ಬ ಚಾಕ್ಕಾರ್ ಅಭಿನಯ ಮತ್ತು ಕುಣಿತ ಬಲ್ಲವನು. ನಂಬಿಯಾರ್ ವಾಳಾವು (ಮದ್ದಳ) ವಾದ್ಯ ಬಾರಿಸುವವನು. ಇನ್ನೊಬ್ಬ ನಂಗ್ಯಾರ್ ಹಾಡು ಮತ್ತು ಶೃತಿಗಳನ್ನು ಬಲ್ಲವ. ಈ ಆಟದ ಬೆಳವಣಿಗೆಯಲ್ಲಿ 10ನೇ ಶತಮಾನದ ಅನಂತರದಲ್ಲಿ ವಿದೂಷಕ ಪಾತ್ರ ಸೇರಿದಂತೆ ಉಲ್ಲೇಖಗಳಿವೆ. ಈತನಿಗೆ 'ತೋಳಾನ್' ಎಂದು ಹೆಸರು. ಚಾಕ್ಕಾರ ಕೂತ್ತನ್ನು ಆಡುವುದಕ್ಕೆ ಸಂಯೋಜಿಸಲಾದ ದೇಶಭಾಷೆಯಲ್ಲಿನ ಆಟದ ಕೃತಿಗಳೆಂದರೆ 'ದೂತವಾಕ್ಯ' ಪಾಂಚಾಲೀ ಸ್ವಯಂವರ, ಸುಭದ್ರಾಹರಣ, ಕೌಂಡೇಯಾಷ್ಟಕಂ. ಈ ಆಟಗಳಲ್ಲಿ ಮೂರು ಪ್ರಕಾರಗಳನ್ನು ಮಾಡಲಾಗಿದೆ. ಪ್ರಬಂಧಕೂತ್ತು, ನನ್ನಾರ್ ಕೂತ್ತು ಮತ್ತು ಕೂಡಿಯಾಟ್ಟಂ. ಮೊದಲನೆಯದು ಒಂದು ರೀತಿಯ ಏಕಪಾತ್ರಾಭಿನಯ, ನನ್ನಾ ಚಂಬಾಳ್ ಮತ್ತು ಮದ್ದಳೆ ವಾದ್ಯಗಳಿಂದಲೂ ಹಾಗೂ ಸ್ತ್ರೀಪಾತ್ರಗಳ ಹಾಡು

ಮತ್ತು ಕುಣಿತದಿಂದಲೂ ಕೂಡಿರುತ್ತದೆ. 'ಕೂಡಿಯಾಟ್ಟಂ' ಇವೆಲ್ಲವುಗಳಲ್ಲಿ ಪ್ರಸಿದ್ಧವಾದ ರಂಗ ಪ್ರದರ್ಶನದ ಆಟವಾಗಿದೆ. 'ಕೂಡಿಯಾಟ್ಟಂ' ದೇವಾಲಯದ ಆವರಣದಲ್ಲಿಯೇ ಪ್ರದರ್ಶನಗೊಳ್ಳುವುದರಿಂದ ಇದು ದೇವಸ್ಥಾನದ ಒಂದು ಕಲೆಯಾಗಿ ಬೆಳೆದುಬಂದಿದೆ.

## ಇ. ತಮಿಳು ಮತ್ತು ಕನ್ನಡ ಪ್ರದೇಶದ ರಂಗಭೂಮಿ

ಆಂಧ್ರ, ಕೇರಳ ಮತ್ತು ಮಹಾರಾಷ್ಟ್ರಗಳ ಸಂಸ್ಕೃತಿಯಿಂದ ಕನ್ನಡ ಸಂಸ್ಕೃತಿಯ ಮೇಲೆ ಆಗಿರುವ ಪ್ರಭಾವಗಳನ್ನು, ಅದರಲ್ಲಿಯೂ ರಂಗಭೂಮಿಯ ಪ್ರಭಾವಗಳನ್ನು ಗಮನಿಸಿದಾಗ ಈ ಸಂಬಂಧ ಅತಿ ಹೆಚ್ಚಿನ ಮಟ್ಟದಲ್ಲಿ ನಮಗೆ ಕಾಣಿಸುತ್ತದೆ. ಆದರೆ ಈ ಮಟ್ಟದಲ್ಲಿ ತಮಿಳುನಾಡಿನ ಜೊತೆಗಿನ ರಂಗ ಸಂಬಂಧ ನಡೆದಿಲ್ಲವೆಂದೇ ಹೇಳಬಹುದು. ತಮಿಳುನಾಡಿನ ತೆರಕೂತ್ತು ಎಂಬ ರಂಗಭೂಮಿ ಸಂಪ್ರದಾಯ ನಮ್ಮ ಬಯಲಾಟಕ್ಕೆ ಹೆಚ್ಚು ನಿಕಟವಾಗಿ ಅಸ್ತಿತ್ವದಲ್ಲಿದೆ. ಆದರೆ ಅದರ ನೇರ ಪ್ರಭಾವ ಕರ್ನಾಟಕದ ಮೇಲೆ ಆಗಲಿ, ಕರ್ನಾಟಕದ ಬಯಲಾಟಗಳ ಅಥವಾ ಯಕ್ಷಗಾನಗಳ ನೇರ ಪ್ರಭಾವ ತಮಿಳುನಾಡಿನ ಜನಪದ ರಂಗಭೂಮಿ ಮೇಲಾಗಲಿ ಆಗಿರುವುದು ಅಷ್ಟಾಗಿ ಕಂಡುಬರುವುದಿಲ್ಲ. ಆದರೆ ಕೇರಳದ ಕಥಕ್ಕಳಿ, ಕರ್ನಾಟಕದ ಯಕ್ಷಗಾನ ಬಯಲಾಟ, ಆಂಧ್ರದ ವೀದಿನಾಟಕಂ, ರಂಗಪ್ರಕಾರಗಳಿಗೆ ಸಮಾನಾಂತರವಾಗಿ ಇರುವ ತೆರಕೂತ್ತು ಎಂಬ ತಮಿಳು ಜನಪದ ರಂಗ ಸಂಪ್ರದಾಯ ದ್ರಾವಿಡ ರಂಗಭೂಮಿಯ ಕಲ್ಪನೆಗೆ ಹೆಚ್ಚು ಒತ್ತು ಕೊಡುತ್ತದೆ ಎಂಬುದಂತೂ ನಿಜ. ಆದರೆ ಜನಪದ ಕಲೆಗಳ ಸಂಬಂಧಗಳನ್ನು ಪರಿಗಣಿಸುವಾಗ ಪ್ರಸ್ತುತ ನಮ್ಮಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಕರಗದ ಕಲೆ, ಕಾವಡಿ ಕಲೆ, ಮತ್ತು ಕೀಲು ಕುದುರೆ ಕಲೆಗಳು ಬೇರೆ ಬೇರೆ ಸಂದರ್ಭಗಳಲ್ಲಿ ಕರ್ನಾಟಕಕ್ಕೆ ಬಂದಂತೆ ಕಾಣುತ್ತದೆ.

## ಈ. ತೆಲುಗು ಮತ್ತು ಕನ್ನಡ ಗಡಿ ಪ್ರದೇಶದ ರಂಗಭೂಮಿ

ಕರ್ನಾಟಕದ ಗಡಿಯಲ್ಲಿರುವ ಇತರೆಲ್ಲ ರಾಜ್ಯಗಳಿಗೆ ಹೋಲಿಸಿದರೆ ತೆಲುಗು ಮತ್ತು ಕನ್ನಡದ ಸಾಂಸ್ಕೃತಿಕ ಬಾಂಧವ್ಯ ಅತಿ ಹೆಚ್ಚಿನ ಮಟ್ಟದಲ್ಲಿ ಬೆಸೆದುಕೊಂಡಿರುವುದು ಕಂಡುಬರುತ್ತದೆ. ಗುಲ್ಬರ್ಗಾ ಮತ್ತು ಬೀದರ್‌ನಿಂದ ಹಿಡಿದು ಬೆಂಗಳೂರು ಜಿಲ್ಲೆಯವರೆಗೆ ದೀರ್ಘವಾದ ಗಡಿಯನ್ನು ಹೊಂದಿರುವ ಆಂಧ್ರ ಮತ್ತು ಕರ್ನಾಟಕ ರಾಜ್ಯಗಳು ಮೊದಲಿನಿಂದಲೂ ಸಾಮಾಜಿಕವಾಗಿ, ಆರ್ಥಿಕವಾಗಿ, ಕೌಟುಂಬಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಎಲ್ಲ ರೀತಿಯ

ISSN : 3048-7137

ಸಂಬಂಧಗಳನ್ನು ಇಟ್ಟುಕೊಂಡು ಬಂದಿವೆ. ಹಾಗೆ ನೋಡಿದರೆ ತೆಲುಗು ಮತ್ತು ಕನ್ನಡ ಭಾಷೆಗಳು ಒಂದೇ ಆಗಿದ್ದು ಬಹುವರ್ಷಗಳ ಕಾಲ ಏಕರೂಪಿ ಲಿಪಿ ಮತ್ತು ಭಾಷೆಯನ್ನು ಹೊಂದಿದ್ದವು. ಆ ರೀತಿಯ ಸಂಬಂಧ ಇವತ್ತಿಗೂ ನಿಚ್ಚಳವಾಗಿ ಕಾಣಿಸಿಕೊಳ್ಳುತ್ತದೆ.

ವಿಜಯನಗರದ ಸಾಮ್ರಾಜ್ಯ ಎರಡು ಪ್ರದೇಶಗಳ ಬಾಂಧವ್ಯವನ್ನು ಮತ್ತಷ್ಟು ಗಾಢವಾಗಿಸಿತು. ಗಡಿ ಭಾಷೆ ಅಥವಾ ಪ್ರಾಂತ್ಯದ ಭೇದವಿಲ್ಲದೆ ಅಂದಿನ ಅರಸರು ಇವೆಲ್ಲಾ ಒಂದೇ ಎನ್ನುವಂತೆ ಆಡಳಿತ ನಡೆಸಿದ್ದರು. ತಿರುಪತಿ ವೆಂಕಟೇಶ್ವರನ ಆರಾಧನೆ ಕರ್ನಾಟಕ ಮತ್ತು ಆಂಧ್ರಗಳೆರಡಕ್ಕೂ ಸಮಾನವಾದ ರೀತಿಯಲ್ಲಿ ಇದ್ದದ್ದು ಸಾಂಸ್ಕೃತಿಕ ಬಾಂಧವ್ಯ ಬೆಸೆಯಲು ಮತ್ತೊಂದು ಕಾರಣವೆಂದು ಹೇಳಬಹುದು. ಹೀಗೆ ಧಾರ್ಮಿಕ ಬಾಂಧವ್ಯ ಕೂಡ ಕರ್ನಾಟಕದ ಮತ್ತು ಆಂಧ್ರದ ಸಂಬಂಧವನ್ನು ಹೆಚ್ಚಿಸುತ್ತಾ ಬಂದಿದೆ.

ಜನಪದ ರಂಗ ಕಲೆಗಳ ಸಂಬಂಧದಲ್ಲಿ ನೋಡುವುದಾದರೆ ಆಂಧ್ರದ ವೀದಿನಾಟಕಮು ಎಂಬ ದೇಶೀ ಪ್ರಕಾರ ಕರ್ನಾಟಕ ಜನಪದ ರಂಗಭೂಮಿಯ ಮೇಲೆ ಅಂತಹ ಪ್ರಭಾವ ಬೀರಿರುವುದು ಏನೂ ಕಂಡುಬರುವುದಿಲ್ಲ. ಹಾಗೆಯೇ ಕರ್ನಾಟಕದ ಬಯಲಾಟ ಪ್ರಕಾರ ವೀದಿನಾಟಕದ ಮೇಲೆ ಪ್ರಭಾವ ಬೀರಿರುವ ಅಂಶವೂ ಕಂಡುಬರುವುದಿಲ್ಲ. ಆದರೆ ಜನಪದ ಕಲೆಗಳ ದೃಷ್ಟಿಯಿಂದ ನೋಡುವುದಾದರೆ ಅನೇಕ ರೀತಿಯ ಪ್ರಭಾವಗಳು ಉಂಟಾಗಿವೆ. ಬುರ್ರಕಥ ಎಂಬ ರಂಗಭೂಮಿಗೆ ಹತ್ತಿರವಾದ ವೃತ್ತಿ ಗಾಯಕರ ಕಲೆ ಆಂಧ್ರದಿಂದ ಬಂದು ಕರ್ನಾಟಕದ ಗಡಿ ಭಾಗಗಳಲ್ಲಿ ಹೆಚ್ಚು ಜನಪ್ರಿಯವಾಗಿವೆ. ಪಂಡರಿ ಭಜನೆ, ಮುಖವೀಣೆ, ತೊಗಲುಗೊಂಬೆ, ಹುಲಿವೇಷ, ಕೋಲಾಟ, ಕೋಲೆ ಬಸವ (ಗಂಗೆತ್ತುಗಳ ಆಟ) ಭೂತೇರ ಕುಣಿತ, ಗೊಂದಲಿಗರ ಮೇಳ, ಕೊಂಡಮಾಮ, ಗಾರುಡಿಬೊಂಬೆ ಮುಂತಾದ ಜನಪದ ಕಲೆಗಳು ಆಂಧ್ರ ಮತ್ತು ಕರ್ನಾಟಕದಲ್ಲಿ ಸಮಾನವಾಗಿ ಕಂಡುಬರುತ್ತದೆ.

ಇಲ್ಲಿ ಗಮನಿಸಬೇಕಾದ ಬಹುಮುಖ್ಯವಾದ ಒಂದು ಪ್ರಕಾರವೆಂದರೆ ಪ್ರಸ್ತುತ ವಿಷಯವಾದ 'ಕೇಳಿಕೆ ರಂಗ ಸಂಪ್ರದಾಯ' ಕೇಳಿಕೆ ಒಂದು ರೀತಿಯಲ್ಲಿ ಕಥನ ಸಂಪ್ರದಾಯಗಳಿಗೆ ಹತ್ತಿರವಾದ ಬುರಕಥೆ, ಮುಂತಾದ ವಿವರಣಾತ್ಮಕ ಕಥಾ ಪ್ರಕಾರಕ್ಕೆ ಹತ್ತಿರವಾದ ಒಂದು ರಂಗಕಲೆಯಾಗಿ ಕಾಣಿಸಿಕೊಳ್ಳುತ್ತದೆ. ತೊಗಲು ಗೊಂಬೆಯ ರೀತಿಯ ಹಾಡುಗಾರಿಕೆ, ಬುರ್ರಕಥ ಮಾದರಿಯ ಶೈಲಿ, ಸಣ್ಣಾಟ ಮಾದರಿಯ ಸಂಭಾಷಣೆ, ಮೂಡಲಪಾಯ ಯಕ್ಷಗಾನ ಮಾದರಿಯ ಹೆಜ್ಜೆ

ಗೆಜ್ಜೆಗಳು ಕೇಳಿಕೆಯಲ್ಲಿ ಕಂಡುಬರುತ್ತವೆ. ಒಂದು ರೀತಿಯಲ್ಲಿ ದ್ರಾವಿಡ ರಂಗಭೂಮಿಯ ಪ್ರಾಚೀನ ಅಂಶಗಳು ಮತ್ತು ಆಧುನಿಕ ಜನಪದ ರಂಗಭೂಮಿಯ ಸುಧಾರಿತ ಅಂಶಗಳು ಎರಡೂ ಈ ಕಲೆಯಲ್ಲಿ ಅತಿ ಸೂಕ್ಷ್ಮವಾಗಿ ಪರೋಕ್ಷವಾಗಿ ಕಂಡುಬರುತ್ತವೆ. ಆಂಧ್ರದ ಬುರಕಥಾ ಎಂಬ ಕಥನ ಸಂಪ್ರದಾಯ ಮತ್ತು ಕರ್ನಾಟಕದ ಮೂಡಲಪಾಯ ಯಕ್ಷಗಾನದ ರಂಗ ಸಂಪ್ರದಾಯ ಎರಡು ಒಗ್ಗೂಡಿದ ವಿಶಿಷ್ಟ ರಂಗ ಪರಂಪರೆಯಾಗಿ ಕೇಳಿಕೆ ಕಂಡುಬರುತ್ತದೆ. ಬಹುಶಃ ಪೂರ್ವದಲ್ಲಿ ಕುಂತು ಕೇಳುವ ಕಥನ ಸಂಪ್ರದಾಯವಾಗಿದ್ದು ಆನಂತರದಲ್ಲಿ ರಂಗಕ್ಕೆ ಅಳವಡಿಕೆಯಾಗಿರುವಂತೆ ಭಾಸವಾಗುತ್ತದೆ. ಆದ್ದರಿಂದಲೇ ಈ ಸಂಪ್ರದಾಯಕ್ಕೆ 'ಕೇಳಿಕೆ' ಎಂಬ ಹೆಸರು ಬಂತೆ ಎಂಬುದನ್ನು ಇನ್ನಷ್ಟು ಸಂಶೋಧನೆಗಳ ಮೂಲಕ ಖಚಿತಪಡಿಸಿಕೊಳ್ಳಬೇಕಾಗಿದೆ.

ಇಲ್ಲಿಯವರೆಗೆ ನಾವು ಚರ್ಚಿಸಿದ ಈ ನಾಲ್ಕು ರಾಜ್ಯಗಳ ಗಡಿಗಳ ಸಾಂಸ್ಕೃತಿಕ ರಂಗ ಸಂಬಂಧವನ್ನು ಮತ್ತಷ್ಟು ಸೂಕ್ಷ್ಮವಾಗಿ ಗಮನಿಸಿದರೆ ಹಾಗೂ ಈ ಎಲ್ಲಾ ರಾಜ್ಯಗಳ ಜನಪದ ರಂಗಭೂಮಿಯಲ್ಲಿ ಸಮಾನವಾದ ಅಂಶಗಳು ಮತ್ತು ಸಮಾನವಾದ ಆಶಯಗಳು ಕಂಡುಬರುವುದರಿಂದ ಇವೆಲ್ಲಕ್ಕೂ ಪೂರ್ವದಲ್ಲಿ ದ್ರಾವಿಡ ರಂಗಭೂಮಿಯೊಂದರ ಅಸ್ತಿತ್ವ ಇತ್ತು ಎಂಬ ವಿಚಾರ ಖಚಿತವಾಗುತ್ತದೆ. ಇದನ್ನು ಮತ್ತಷ್ಟು ಖಚಿತಗೊಳಿಸಬೇಕಾದಲ್ಲಿ ವಿದ್ವಾಂಸರೊಬ್ಬರ ಈ ಅಭಿಪ್ರಾಯವನ್ನು ಇಲ್ಲಿ ಗಮನಿಸಬಹುದು.

"ಬೆಳಕು ನೀಡಿದ ಸೂರ್ಯಚಂದ್ರ, ಮಳೆ ನೀಡಿದ ಮೋಡ, ಹಸಿರಿನ ಭಾಗ್ಯ ಕೊಟ್ಟ ಗುಡ್ಡ ಬೆಟ್ಟ, ಆಹಾರ ನೀಡಿದ ಸಸ್ಯರಾಶಿ ಅವನಲ್ಲಿ ದೈನ್ಯತೆಯನ್ನು ಹುಟ್ಟಿಸಿದರೆ; ಪ್ರಕೃತಿಯ ವೈಪರೀತ್ಯಗಳು, ಹಾವು, ಚೇಳು, ಹುಲಿ, ಸಿಂಹ ಮೊದಲಾದ ಕ್ರೂರ ಪ್ರಾಣಿಗಳು, ಮಾರಕ ರೋಗ ಅವನಲ್ಲಿ ಭಯವನ್ನು ಮೂಡಿಸಿದವು. ಒಂದು ಹಂತದಲ್ಲಿ ಅವನ ಭಕ್ತಿ ಮತ್ತು ಭಯ ಒಂದಾಗಿ ಸೇರಿದವು. ಈ ಭಕ್ತಿ ಮತ್ತು ಭಯದ ಅಂತರಂಗ ಸಂವೇದನೆ ದೈವದ ಕಲ್ಪನೆಯನ್ನು ಹುಟ್ಟುಹಾಕಿತು. ಭಕ್ತಿ 'ದೈವ'ವಾಗಿ ಭಯ 'ಭೂತ'ವಾಗಿ ಅವನ ಮನಸ್ಸು ಹೊಕ್ಕಾಗ ದೈವಕ್ಕೆ ಸಾತ್ವಿಕ ಪೂಜೆಯನ್ನೂ ಭೂತಕ್ಕೆ ಅದನ್ನು ವಶಪಡಿಸಿಕೊಳ್ಳುವ ಅಥವಾ ಶಮನ ಮಾಡುವ ಮಂತ್ರಮಾಟಗಳನ್ನು ಮನುಷ್ಯ ಜಾರಿಗೆ ತಂದ. ಈ ಮಂತ್ರಮಾಟಗಳು ಹೆಚ್ಚು ಅನುಕರಣೆ ಹಾಗೂ ನಾಟಕೀಯ ಅಂಶಗಳಿಂದ ಕೂಡಿರುತ್ತಿದ್ದುವಲ್ಲದೆ, ಮಾಂತ್ರಿಕನ ಅಭಿನಯ ತುಂಬ 'ಕ್ರೂಡ್' ಆಗಿದ್ದರೂ ನೋಡುಗರ ಮೇಲೆ ಪ್ರಭಾವ ಬೀರುತ್ತಿತ್ತು.

ISSN : 3048-7137

ಒಂದು ಆರಾಧನೆಯಲ್ಲಿ ಹೀಗೆ ಪೂಜೆಯೂ, ಮಂತ್ರಮಾಟವೂ ಒಟ್ಟಾಗಿ ಸಮ್ಮಿಳಿತಗೊಂಡಿರುತ್ತವೆ. ಇಂದಿನ ಹಲವು ಆರಾಧನೆಗಳಲ್ಲಿ ಸಾತ್ವಿಕ ಪೂಜೆಯ ಅಂಶ ಯಾವುದು ಮತ್ತು ಮಾಟಗಳ ಅಂಶ ಯಾವುದು ಎಂಬುದನ್ನು ಸ್ಪಷ್ಟವಾಗಿ ಗೆರೆ ಎಳೆದು ತೋರಿಸಲು ಸಾಧ್ಯವಾಗದಿರಬಹುದು. ಆದರೆ ಭಕ್ತಿ ಮತ್ತು ಭಯ ಆರಾಧನೆಯ ಮೂಲ ಎಂಬುದನ್ನು ನಾವು ಒಪ್ಪಲೇಬೇಕಾಗುತ್ತದೆ.

ಒಂದು ಆರಾಧನೆಯ ಹಲವು ಕ್ರಿಯೆಗಳೇ ಮುಂದೆ ನಾಟ್ಯಾಂಶ ಪಡೆದು ಕಲೆಗಳಾದವು. ಆರಾಧನೆ ಎನ್ನುವುದು ಕೇವಲ ಉಪಾಸನೆ ಅಲ್ಲ. ಹಾಡುವುದು, ಕುಣಿಯುವುದು, ದೀನನಾಗಿ ಅಡ್ಡ ಬೀಳುವುದು, ಕೈಮುಗಿದು ಧ್ಯಾನಿಸುವುದು, ಕಿರುಚುವ ಮೂಲಕ ಅರಿಕೆ ಮಾಡಿಕೊಳ್ಳುವುದು ಇತ್ಯಾದಿಯಾಗಿ ಹಲವು ಅಭಿನಯಗಳು ಅದರಲ್ಲಿರುತ್ತಿದ್ದವು. ಹೀಗೆ ಅನುಸರಿಸುತ್ತಿದ್ದ ಹಲವು ಆಂಗಿಕ ಚಲನೆಗಳೇ ಒಂದು ಶಿಸ್ತಿಗೆ ಒಳಪಟ್ಟು, ಒಂದು ಚೌಕಟ್ಟಿಗೆ ಒಳಪಟ್ಟು ಪಾಡ್ದನಗಳ ರೂಪಪಡೆದವು; ವೈದ್ಯ ನೃತ್ಯ, ಕಾಡ್ಯನಾಟ್ಯ, ಕರಂಗೋಲು, ಆಟಿಕಳೆಂಜ ಮುಂತಾದ ಕಲೆಗಳಾದವು. ಹೀಗೆ ಉಗಮಗೊಂಡ ಹಾಡು ಮತ್ತು ಕಲೆಗಳು ನಿರ್ದಿಷ್ಟ ಸಂದರ್ಭದಲ್ಲಿ ಮತ್ತೆ ಮತ್ತೆ ಪುನರುಕ್ತಿಗೊಳ್ಳುವ ಮೂಲಕ ಆಚರಣೆಯ ಭಾಗಗಳಾದವು.

ಇಂಥ ದೈವೀ ಸಂಬಂಧದ ಕಲೆಗಳೇ ಮುಂದೆ ರಂಗ ರೂಪ ಪಡೆಯುತ್ತಾ ಬಂದದ್ದು ಇನ್ನಷ್ಟು ಕುತೂಹಲಕರ. ದಕ್ಷಿಣ ಕನ್ನಡದ 'ಜಾಲಾಟ' ಹಾಗೂ ಉತ್ತರ ಕನ್ನಡದ 'ಹಗರಣ' ಈ ಹಂತಕ್ಕೊಂದು ಉದಾಹರಣೆ. ಅಂದರೆ, ನಾಟಕಾಂಶ ಬೆರೆತ ಆಚರಣಾ ವಿಧಿಗಳು ದಿನಗಟ್ಟಲೆ ನಡೆಯುವಂತೆ, ಅದರಲ್ಲಿ ಎಲ್ಲರೂ ಪಾಲ್ಗೊಳ್ಳುವಂತೆ ಮಾಡುವ ಮೂಲಕ ಅದನ್ನು ಮನರಂಜನೆಯನ್ನಾಗಿಯೂ ಹಾಗೂ ಆರಾಧನೆಯನ್ನಾಗಿಯೂ ಪರಿಗಣಿಸಿದ ಮಹತ್ವದ ಘಟ್ಟವೇ ಇಂದಿನ ನಮ್ಮ ಯಕ್ಷರಂಗ ಅಥವಾ ಬಯಲಾಟದ ರಂಗಕ್ಕೆ ಪೂರಕ. ಇಡೀ ದಕ್ಷಿಣ ಭಾರತದಲ್ಲಿ ಪ್ರಚಲಿತವಿದ್ದ ಗ್ರಾಮದೇವತೆಗಳು 'ಹಬ್ಬಾರಾಧನೆ' ಈ ರಂಗದ ಬೆಳವಣಿಗೆಯ ಹಿಂದೆ ಕೆಲಸ ಮಾಡಿರುವ ಕಾರಣ ಒಂದೇ ರೂಪದ ರಂಗ ಸಂಪ್ರದಾಯ ಹುಟ್ಟಿಕೊಂಡಂತೆ ಕಾಣುತ್ತದೆ. ಅನಂತರ ಆಯಾ ಪ್ರಾದೇಶಿಕ ವೈಲಕ್ಷಣಗಳು ಮತ್ತು ಆಚರಣೆಗಳನ್ನು ಬಳಸಿಕೊಂಡು ಹೊರ ಸ್ವರೂಪದಲ್ಲಿ ಬೇರೆ ಬೇರೆಯಾದಂತೆ ಕಾಣುತ್ತದೆ.

ಹೀಗೆ ಹಬ್ಬಗಳ ಸಂದರ್ಭದ ದೇವಾಲಯದ ಭಾಗಗಳಾಗಿ ರೂಪುಗೊಳ್ಳುತ್ತಾ ಬಂದ ಈ ಬಯಲುರಂಗ ಆಯಾ ದೇವತೆಯರ ಕಥೆಯನ್ನೇ

ವಸ್ತುವನ್ನಾಗಿಸಿಕೊಂಡು, ಶಿಸ್ತಿಗೆ ಒಳಪಟ್ಟು ಒಂದು ಪೂರ್ಣ ಪ್ರಮಾಣದ ರಂಗವಾಗಿರುವ ಸಾಧ್ಯತೆಯೇ ಹೆಚ್ಚು. ಇದುವರೆಗೆ ನಾನು ಹೇಳಿದ್ದು ನಾವು ಕಂಡಿರದ, ಆದರೆ ಊಹಿಸಲು ಸಾಧ್ಯವಿರುವ ಒಂದು ರಂಗದ ಕಲ್ಪನೆ. ಆದರೆ, ಅದು ಹೀಗೇ ಇತ್ತು ಎಂದು ವಾದಿಸುವ ಹಠ ನನ್ನದಲ್ಲ.

ಈ ಹಂತದ ನಂತರ ಈ ರಂಗದಲ್ಲಿ ಆದ ಬೆಳವಣಿಗೆ ಮತ್ತು ಬದಲಾವಣೆಗಳು ನಮ್ಮ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಗಳನ್ನು ಅವಲಂಬಿಸಿಯೇ ಆದದ್ದಿದೆ. ಆಯಾ ಗ್ರಾಮದೇವತೆಗಳ ಆರಾಧನೆಯ ಅಂಗವಾಗಿ ಬೆಳೆದ ಈ ಬಯಲಾಟಗಳು (ಗ್ರಾಮದೇವತೆಗಳು ಕೂಡ ಬಯಲಿನಲ್ಲೇ ಇರುತ್ತಿದ್ದವು ಹೊಸ ಧರ್ಮ ಅಥವಾ ವಿಚಾರಗಳ ಸಂಘರ್ಷದಲ್ಲಿ ಸಿಲುಕಿದ ಐತಿಹಾಸಿಕ ಘಟ್ಟವೊಂದಿದೆ. ಬಹುತೇಕ ದುಡಿಯುವ ವರ್ಗ ಮತ್ತು ಕೆಳವರ್ಗಗಳೇ ಈ ಬಯಲಾಟದಲ್ಲಿ ಪಾಲ್ಗೊಳ್ಳುತ್ತಿದ್ದವು ಎಂಬುದು ಇಲ್ಲಿ ಮುಖ್ಯ. ಅಂದರೆ ಯಾರು ಗ್ರಾಮ ದೇವತೆಗಳನ್ನು ಒಪ್ಪಿಕೊಂಡು ಆರಾಧಿಸುತ್ತಿದ್ದರೋ ಅವರೇ ಆರಾಧನಾ ರಂಗದ ಪಾತ್ರಧಾರಿಗಳು ಕೂಡ ಆಗಿದ್ದರು. ಮೇಲ್ವರ್ಗದ ಪಾಲ್ಗೊಳ್ಳುವಿಕೆ ಇಲ್ಲಿ ನಿಷಿದ್ಧವಾಗಿತ್ತು. ಆರ್ಯಮೂಲ ದೈವಾರಾಧನೆಯ ಮೇಲ್ವರ್ಗದ ಜನರು ಈ ಆಟ ನೋಡಿದರೆ ಆ ಪಾಪ ಕಳೆಯಲು ‘ಹದಿನಾರು ರಂಗಪೂಜೆ’ ನೋಡಬೇಕು ಎಂಬ ನಂಬಿಕೆಯೂ ಇತ್ತಂತೆ. ಆದರೆ ಸುಮಾರು 12 ರಿಂದ 15ನೇ ಶತಮಾನದ ಅವಧಿಯಲ್ಲಿ ಬಹುತೇಕ ಬಯಲುರಂಗ ಪ್ರಕಾರಗಳು ‘ವೈದಿಕೀಕರಣ’ ಗೊಂಡನಂತರ ಬಯಲುರಂಗದಲ್ಲಿ ಆದ ಬದಲಾವಣೆಗಳು ತುಂಬ ಮಹತ್ವಪೂರ್ಣ ಮತ್ತು ಅಧ್ಯಯನ ಯೋಗ್ಯ.

ಜೈನ, ಶೈವ, ವೀರಶೈವ, ವೈಷ್ಣವ ಹಾಗೂ ಶ್ರೀ ವೈಷ್ಣವ ಇತ್ಯಾದಿ ಧರ್ಮಪಂಥಗಳು ಇದ್ದಕ್ಕಿದ್ದ ಹಾಗೆ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಟ ಆರಂಭಿಸಿದ ಕಾಲ ಅದಾಗಿತ್ತು. ತಮ್ಮ ತಮ್ಮ ಮತ ಪಂಥಗಳ ಪ್ರಚಾರಕ್ಕೆ ಅನೇಕ ಜನಪದ ಕಲೆಗಳೇ ಮೈ ತಾಳಿದ ಸಂದರ್ಭಗಳೂ ಉಂಟು. ವೀರಗಾಸೆ, ವೀರಭದ್ರ, ನೃತ್ಯ, ಪಂಡರಿ ಭಜನೆ, ಭಾಗವಂತಿಕೆ ಮೇಳ, ಸಿದ್ಧವೇಷ, ಹರದೇಶಿ–ನಾಗೇಶಿ, ಕಂಸಾಳೆ, ಚೌಡಿಕೆ, ಗೊರವ ಕುಣಿತ ಮುಂತಾದ ಹಲವು ಕಲಾ ಪ್ರಕಾರಗಳನ್ನು ಇಲ್ಲಿ ಹೆಸರಿಸಬಹುದು. ಈ ಎಲ್ಲ ಕಲೆಗಳೂ ಒಂದಲ್ಲ ಒಂದು ರೀತಿಯಲ್ಲಿ ತಂತಮ್ಮ ಮತ ಪಂಥಗಳನ್ನು ವೈಭವೀಕರಿಸುವ ಕೆಲಸವನ್ನೇ ಮಾಡುತ್ತಾ ಜನಸಾಮಾನ್ಯರನ್ನು ತಮ್ಮತ್ತ ಸೆಳೆಯುವ ಪ್ರಯತ್ನ ಮಾಡಿದವು.

ಇದೇ ಸಂದರ್ಭದಲ್ಲಿಯೇ ದೇವಸ್ಥಾನದಲ್ಲಿ ಉಳಿದಿದ್ದ ಈ ಬಯಲಾಟವನ್ನು

ISSN : 3048-7137

ವೈದಿಕವಾಗಿಸುವ ಮೂಲಕ ಜೈನಬೌದ್ಧರ ವಿರುದ್ಧ ಹಿಂದೂ ಧರ್ಮದ ಮಹತ್ವ ಮತ್ತು ಪರಿಕಲ್ಪನೆಗಳನ್ನು ಸಾರುವ ಸಾಧನವನ್ನಾಗಿ ಬಳಸಿದವರು ಬಹುಶಃ ನಮ್ಮ ಆಚಾರ್ಯರುಗಳು. ಶಂಕರಾಚಾರ್ಯ, ರಾಮಾನುಜಾಚಾರ್ಯ ಹಾಗೂ ಮಧ್ವಾಚಾರ್ಯರು ಈ ಬಯಲು ರಂಗವನ್ನು ವೈದಿಕೀಕರಣಗೊಳಿಸಿದರಷ್ಟೇ ಅಲ್ಲ, ಬಯಲಾಟಗಳಲ್ಲಿ ಸಂಪೂರ್ಣ ವೈಷ್ಣವ ಪ್ರಾಧಾನ್ಯತೆಯನ್ನು ಮೆರೆಯುವಂತೆ ಕೂಡ ನೋಡಿಕೊಂಡರು. ಆದ್ದರಿಂದಲೇ ಈ ರಂಗವನ್ನು ದಶಾವತಾರದ ಆಟ, ಎಂದೇ ಕರೆಯುವ ರೂಢಿಯೂ ಇದೆ. ಆದರೆ ಶೈವ ಪ್ರಸಂಗಗಳು ಇಲ್ಲ ಎಂದು ನಾನು ಹೇಳುತ್ತಿಲ್ಲ. ಇಡೀ ಕರ್ನಾಟಕದ ಎಲ್ಲ ಪ್ರಕಾರದ ಬಯಲಾಟಗಳಲ್ಲಿಯೂ ಶೈವ ಸಂಬಂಧೀ ಪ್ರಸಂಗಗಳು ಎಣಿಸುವಷ್ಟು ಕಡಿಮೆ.

ಇಲ್ಲಿಂದ ಯಕ್ಷರಂಗದ ಆರಾಧನೆ ನಮ್ಮ ಅವತಾರ ಪುರುಷರನ್ನು ಕೊಂಡಾಡಲು ಅಥವಾ ಅವರ ಅನೇಕಾನೇಕ ಮಹಿಮೆಗಳನ್ನು ಸಾರಲು ಆ ಮೂಲಕ ಉದ್ದೇಶಪೂರ್ವಕವಾಗಿ ಯಲ್ಲದಿದ್ದರೂ ಪರೋಕ್ಷವಾಗಿ ಧರ್ಮ ಪ್ರಚಾರಕ್ಕೆ ಸೀಮಿತವಾಯಿತು. ಕೇವಲ ಧರ್ಮಾರಾಧನೆಯೇ ಈ ಕಲೆಯ ಉದ್ದೇಶವಾಗಿ ಉಳಿದುಬಿಟ್ಟಿದ್ದರೆ ಯಕ್ಷಗಾನ ಇಂದಿನ ಯಕ್ಷಗಾನವಾಗಿ ಉಳಿಯು ತ್ತಿರಲಿಲ್ಲ. ಈ ಕಲೆಯ ಪಾತ್ರಧಾರಿಗಳಿಗಾಗಲೀ, ಕಲೆಯ ಸಂಘಟಕರಿಗಾಗಲೀ ಧರ್ಮ ಪ್ರಸಾರದ ಪ್ರಮುಖ ಉದ್ದೇಶಗಳಿರಲಿಲ್ಲ. ಪ್ರಸಂಗ ರಚನೆ ಉದ್ದೇಶ ವಿಷ್ಣುವಿನ ಅಥವಾ ಇನ್ನಾವುದೇ ಮಹಿಮವಂತನ ವೈಭವೀಕರಣವಾಗಿತ್ತಾದರೂ ಅದನ್ನು ಅಭಿನಯಿಸುವ ಕಲಾವಿದ ಕಲೆಗಾಗಿ ಹಾಗೂ ತನ್ನ ಆನಂದಕ್ಕಾಗಿ ಅದರಲ್ಲಿ ಪಾಲ್ಗೊಳ್ಳುತ್ತಿದ್ದ. ನೋಡುವ ಪ್ರೇಕ್ಷಕರೂ ಕಲೆಯ ಪಕ್ಷಪಾತಿಗಳೇ ಆಗಿದ್ದರು.

ಈಗ ಮತ್ತೆ ನಾನು ಕಲೆ ಲೌಕಿಕವಾದದ್ದರ ಕಡೆಗೆ ಬರುತ್ತೇನೆ. ಅದು ಇವತ್ತಿನ ಯಕ್ಷಗಾನದ ರೂಪ. ಅಂದರೆ ಇಲ್ಲಿ ದೈವಾರಾಧನೆ ಅಥವಾ ಧರ್ಮಾಂಶ ಇಲ್ಲ ಎಂದಲ್ಲ. ಇದು ಗೌಣವಾಗಿದೆ. ಎರಡನೇ ವಿಚಾರವಾಗಿದೆ. ದೇವಸ್ಥಾನಗಳಿಗೂ ಯಕ್ಷಗಾನಗಳಿಗೂ ಯಾವುದೇ ನೇರ ಸಂಬಂಧವಿಲ್ಲ. ಇದ್ದರೂ ಅದು ನೆಪ ಮಾತ್ರ. ಧರ್ಮಸ್ಥಳ ಅಥವಾ ಕಟೀಲು ದೇವಸ್ಥಾನಗಳು ಯಕ್ಷಗಾನ ಮೇಳಗಳ ಪೋಷಣೆ ಮಾಡುತ್ತಿವೆಯೇ ಹೊರತು ಆರಾಧನೆಯ ಒಂದಂಗವಾಗಿ ಇಟ್ಟುಕೊಂಡಿಲ್ಲ. ಈ ದೃಷ್ಟಿಯಿಂದ ಇವತ್ತಿನ ಯಕ್ಷಗಾನ ಆರಾಧನೆಯ ಕೊಂಡಿಯನ್ನು ಕಳಚಿಕೊಂಡಿದೆ. ಯಕ್ಷಗಾನ ಧಾರ್ಮಿಕ ನೆಲೆಯಿಂದ ಸಾಮಾಜಿಕ ನೆಲೆಗೆ ಬಂದು ತಲುಪುವ ಮೂಲಕ ಲೌಕಿಕವಾಗಿದೆ. ಲೌಕಿಕ ಅಂದಾಕ್ಷಣ ಅದರ ಪ್ರತಿಷ್ಠೆ ಒಂದು ಹಂತ ಕೆಳಗಿಳಿದಿದೆ ಎಂದೇನೂ ಅಲ್ಲ. ನನ್ನ ದೃಷ್ಟಿಯಲ್ಲಿ ಹೀಗೆ

ಲೌಕಿಕವಾಗುವ ಮೂಲಕ ಯಕ್ಷರಂಗ ಹೊಸ ಸಿದ್ಧಿಯತ್ತ ಮುನ್ನಡೆದಿದೆ. ಜಾತಿಯಿಂದ, ಧರ್ಮದಿಂದ ಹಾಗೂ ಇಂಥ ಹಲವು ಕುಬ್ಜ ನೆಲೆಗಳಿಂದ ಹೊರಬರುವ ಮೂಲಕ 'ಜಗತ್ತಿನ ಒಂದು ಕಲೆ'ಯಾಗಿ ಬೆಳೆಯುತ್ತಿದೆ. ಇಂದಿಗೂ ಜಾತಿನಿಷ್ಠವಾಗಿರುವ, ಪ್ರದೇಶನಿಷ್ಠವಾಗಿರುವ, ನಂಬಿಕೆನಿಷ್ಟವಾಗಿರುವ ಭೂತಾರಾಧನೆ ಏಕೆ ಒಂದು ಪರಿಪೂರ್ಣಕಲೆಯಾಗಿ ಬೆಳೆಯಲಿಲ್ಲ? ಯಕ್ಷಗಾನವೆಂಬ ಈ ಆರಾಧನಾ ಕಲೆ ಈ 20ನೇ ಶತಮಾನದಲ್ಲಿ ಎಲ್ಲಕ್ಕೂ ತನ್ನನ್ನು ತೆರೆದುಕೊಂಡಿತು. ಪ್ರಸಂಗಕರ್ತರು ಕೂಡ ಸಮಕಾಲೀನತೆಗೆ ಹಾಗೂ ಸುತ್ತಲ ಪರಿಸರಕ್ಕೆ ತುಡಿದರು. ತಾಳಮದ್ದಲೆಯಂಥ ಒಂದು ಕ್ರಾಂತಿಕಾರಕ ಕಲೆ ಪ್ರತಿದಿನವನ್ನೂ ತನ್ನಲ್ಲಿ ಅರಗಿಸಿಕೊಳ್ಳುತ್ತಾ ಆ ಮೂಲಕ ಸಮಾಜನಿಷ್ಠವಾಗುತ್ತಾ ಯಕ್ಷಗಾನಕ್ಕೆ ಆಹಾರ ಒದಗಿಸುತ್ತದೆ. ಎಲ್ಲ ವರ್ಗಗಳ ಪ್ರತಿಭಾವಂತರ ಪ್ರವೇಶದಿಂದ ಯಕ್ಷಗಾನ ಇನ್ನಷ್ಟು ಉತ್ತಮ ಕಲೆಯಾಗುವ ಸಾಧ್ಯತೆಯಿದೆ.

ಕಡೆಯಲ್ಲಿ ಒಂದು ಮಾತು, 'ಲೌಕಿಕ' ಎಂಬ ಪದವನ್ನು ನಾನು ಹಲವು ಬಾರಿ ಬಳಸಿದ್ದೇನೆ. ಈ ಪದವನ್ನು ನಾನು ತುಂಬ ವಿಶಾಲಾರ್ಥದಲ್ಲಿ ಬಳಸಿದ್ದೇನೆ. ಲೌಕಿಕವಾಗಿದೆ ಎಂದರೆ ಅಷ್ಟರಮಟ್ಟಿಗೆ ವೈಚಾರಿಕವಾಗಿದೆ ಎಂದು ಅರ್ಥ. ಪುರಾಣಗಳನ್ನು, ಧರ್ಮವನ್ನು, ಆರಾಧನೆಯನ್ನು ಮೀರಿ ಇವತ್ತಿನ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಸಮಾಜೀಕರಣಗೊಂಡಿರುವುದೇ ನಾನು ಲೌಕಿಕ ಎಂದು ಬಳಸಲು ಸಾಧ್ಯವಾಗಿಸಿದೆ." (ಹಿ.ಚಿ. ಬೋರಲಿಂಗಯ್ಯ)

## ಕೇಳಿಕೆ ರಂಗಭೂಮಿ

### ಪೀಠಿಕೆ

ಕರ್ನಾಟಕದ ಜನಪದ ರಂಗಭೂಮಿಯಲ್ಲಿ ಈಗಾಗಲೇ ಪ್ರಸಿದ್ಧವಾಗಿರುವ ಯಕ್ಷಗಾನ, ಬಯಲಾಟ, ದೊಡ್ಡಾಟ, ಗೊಂಬೆಯಾಟ ಮತ್ತು ಸಣ್ಣಾಟಗಳ ಪರಿಚಯ ಮತ್ತು ವಿಶ್ಲೇಷಣೆಯನ್ನು ಈಗಾಗಲೇ ಮಾಡಲಾಗಿದೆ. ಹಾಗೆಯೇ ಕರ್ನಾಟಕದ ಸುತ್ತ ಇರುವ ವಿವಿಧ ರಾಜ್ಯಗಳ ಗಡಿ ಪ್ರದೇಶಗಳಲ್ಲಿ ಕಂಡುಬರುವ ರಂಗ ಕಲೆಗಳು ಮತ್ತು ಅವರ ಪರಸ್ಪರ ಸಂಬಂಧಾಂತರಗಳನ್ನು ಕೂಡ ಚರ್ಚಿಸಲಾಗಿದೆ. ಹಾಗೆಯೇ ಗಡಿ ಭಾಗದಲ್ಲಿ ಈ ಸಾಂಸ್ಕೃತಿಕ ಬಾಂಧವ್ಯದ ಮೂಲಕ ಆಗಿರುವ ಸಾಮಾಜಿಕ ಆರ್ಥಿಕ ಮತ್ತು ಕೌಟುಂಬಿಕ ಸಂಬಂಧಗಳನ್ನು ಚರ್ಚಿಸಲಾಗಿದೆ.

ISSN : 3048-7137

ಆಂಧ್ರ ಮತ್ತು ಕರ್ನಾಟಕದ ಗಡಿಯಲ್ಲಿ ಒಂದು ವಿಶೇಷ ಪ್ರಕಾರವಾಗಿ ದೇಶೀ ರಂಗಭೂಮಿಯೊಂದು ಹುಟ್ಟಿಕೊಂಡಿರುವುದು ಅತ್ಯಂತ ಕುತೂಹಲಕರವಾದ ವಿಷಯವಾಗಿದೆ. ಯಾಕೆಂದರೆ ಎರಡು ಭಾಷೆಗಳ ನಡುವಿನ ಸಾಂಸ್ಕೃತಿಕ ಸಮ್ಮಿಲನದಿಂದ ಇಂತಹ ಒಂದು ಬಲಿಷ್ಠ ಹಾಗು ವಿಶೇಷ ಸ್ವರೂಪದ ರಂಗಭೂಮಿ ಉದ್ಭವಿಸಿರುವುದು ಇತರೆ ರಾಜ್ಯಗಳ ಗಡಿಗಳಲ್ಲಿ ಕಂಡುಬಂದಿಲ್ಲ. ಕರ್ನಾಟಕ ಮತ್ತು ಆಂಧ್ರದಲ್ಲಿ ಬಹುಕಾಲದಿಂದ ಬೆಳೆದುಬಂದ ವೃತ್ತಿಗಾಯಕ ಪರಂಪರೆ, ಅದರಲ್ಲಿಯೂ ಬುರ್ರಕಥಾ ಕಲೆ ಮತ್ತು ಮೂಡಲಪಾಯ ಬಯಲಾಟದ ಅಂಶಗಳು ಹಾಗೂ ಆಂಧ್ರದಲ್ಲಿ ಬಹುಕಾಲದಿಂದ ಬೆಳೆದು ಬಂದ 'ವೀದಿನಾಟಕಂ' ಅಂದರೆ ಅರ್ಥಾತ್ 'ಬೀದಿನಾಟಕದ ಅಂಶಗಳು ಸೇರಿ ಈ ವಿಶಿಷ್ಟ ಪ್ರಕಾರವೊಂದು ನಿರ್ಮಾಣವಾದಂತಿದೆ. ಕೇಳಿಕೆಯ ನೃತ್ಯ, ಹೆಜ್ಜೆ, ಕುಣಿತ, ಲಾಸ್ಯ ಮುಂತಾದವುಗಳನ್ನು ನೋಡುವಾಗ ಈ ಎರಡು ರಾಜ್ಯಗಳ ಬಯಲು ನಾಟಕ ಮತ್ತು ಬೀದಿ ನಾಟಕಗಳ ಪ್ರಭಾವ ಆಗಿರುವುದು ಸ್ಪಷ್ಟವಾಗುತ್ತದೆ. ಕೇಳಿಕೆಯ ಹಾಡಿನ ಮತ್ತು ಸಂಗೀತದ ಸ್ವರೂಪವನ್ನು ನೋಡುವಾಗ ಆಂಧ್ರದ ಜನಪದ ಸಮಾಜದಲ್ಲಿ ಬಹುಕಾಲದಿಂದ ಬೆಳೆದು ಬಂದ ಹಾಗೂ ಅತ್ಯಂತ ಹೆಚ್ಚಿನ ಜನಮನ್ನಣೆಯನ್ನು ಪಡೆದ ಬುರ್ರಕಥ ಕಥನ ಸಂಪ್ರದಾಯದ ಹಾಡು ಮತ್ತು ಸಂಗೀತದ ಮಾದರಿಗಳು ಕೇಳಿಕೆಯ ಮೇಲೆ ತುಂಬ ಪ್ರಭಾವ ಬೀರಿರುವಂತೆ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಕೇಳಿಕೆ ಎಂಬ ವಿಶಿಷ್ಟ ಜನಪದ ರಂಗಪ್ರಕಾರದ ವಿಸ್ತೃತ ಅಧ್ಯಯನವನ್ನು ಈ ಅಧ್ಯಾಯದಲ್ಲಿ ಮಾಡಲು ಪ್ರಯತ್ನಿಸಲಾಗಿದೆ. ಈ ಹಿಂದೆಯೇ ಸ್ಪಷ್ಟಪಡಿಸಿರುವಂತೆ ಕೇಳಿಕೆಯ ರಂಗ ಪ್ರಕಾರವನ್ನು ಕುರಿತು ಇದುವರೆಗೆ ಯಾವುದೇ ಗಂಭೀರ ಸ್ವರೂಪದ ಬರಹಗಳು ಪ್ರಕಟವಾಗಿಲ್ಲದ ಕಾರಣ ಸಂಪೂರ್ಣವಾಗಿ ಕ್ಷೇತ್ರಕಾರ್ಯದ ಆಧಾರದ ಮೇಲೆ ಕೇಳಿಕೆಯ ಬಗೆಗಿನ ಕೆಲವು ಸಂಗತಿಗಳನ್ನು ಮುಂದೆ ನಿರೂಪಿಸಲಾಗಿದೆ.

## ಅ. ಕೇಳಿಕೆಯ ಭೌಗೋಳಿಕ ಪ್ರದೇಶದ ವಿವರ

ಕರ್ನಾಟಕದ 30 ಜಿಲ್ಲೆಗಳಲ್ಲಿ ಕೋಲಾರವು ಒಂದು. ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ಸಮೀಪ ಜಿಲ್ಲೆ ಎಂದೇ ಹೆಸರಾದ ಕೋಲಾರ ಜಿಲ್ಲೆ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಬಹಳ ಮುಂದುವರೆದ ಜಿಲ್ಲೆಯೇನೂ ಅಲ್ಲ. ಏಕೆಂದರೆ ಕೋಲಾರ ಜಿಲ್ಲೆಯಲ್ಲಿ ಬಹು ದೊಡ್ಡ ಜೀವನದಿಗಳಾಗಲೀ, ಬೃಹತ್ ನೀರಾವರಿ ವ್ಯವಸ್ಥೆಗಳಾಗಲೀ, ಬೃಹತ್ ಕೈಗಾರಿಕೆಗಳಾಗಲೀ ಇಲ್ಲ. ಆದರೆ ಸಾಂಸ್ಕೃತಿಕವಾಗಿ ಬಹು ಸುಂದರವಾಗಿರುವ ಇಲ್ಲಿನ ನಿಸರ್ಗ ಕೋಲಾರಕ್ಕೆ ತನ್ನದೇ

ಆದ ಸಹಜ ಮೆರುಗನ್ನು ನೀಡಿದೆ. ಶತಶೃಂಗ ಪರ್ವತಗಳು, ನಂದಿಬೆಟ್ಟ, ಅವಣೆ ಬೆಟ್ಟ, ಕೈವಾರದ ಭಸ್ಮಾಸುರ ಬೆಟ್ಟ ಮುಂತಾದುವು ಕೋಲಾರದ ನಿಸರ್ಗದ ಚೆಲುವಿಗೆ ಕಳೆಯನ್ನು ಮೂಡಿಸಿವೆ. ದಕ್ಷಿಣ ಪಿನಾಕಿನಿ ಮತ್ತು ಉತ್ತರ ಪಿನಾಕಿನಿ ಎಂಬ ಎರಡು ನದಿಗಳು ಕೋಲಾರ ಜಿಲ್ಲೆಯಲ್ಲಿ ಇವೆಯಾದರೂ ಅವುಗಳು ತುಂಬಿ ಹರಿದ ಕಾಲವೇ ಇಲ್ಲವೆನ್ನಬಹುದು. ಆದರೆ ಶತಮಾನಗಳ ಹಿಂದೆಯೇ ಅನೇಕ ಆಡಳಿತಗಾರರು, ದೂರದೃಷ್ಟಿಯುಳ್ಳ ಪ್ರಜಾಪತಿಗಳು ಕೋಲಾರದಲ್ಲಿ ಅನೇಕಾನೇಕ ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಇಡೀ ಕರ್ನಾಟಕ ರಾಜ್ಯದಲ್ಲಿಯೇ ಅತಿ ಹೆಚ್ಚು ಕೆರೆಗಳನ್ನು ಉಳ್ಳ ಜಿಲ್ಲೆ ಎಂಬ ಖ್ಯಾತಿಯನ್ನು ಕೋಲಾರ ಪಡೆದಿದೆ. ಅಂಕಿ ಅಂಶಗಳ ಪ್ರಕಾರ 20,000 ಕೆರೆಗಳು ಕೋಲಾರ ದಲ್ಲಿವೆ. ಬರದ ನಾಡು ಎಂದೆ ಖ್ಯಾತವಾಗಿದ್ದ ಕೋಲಾರ ಜಿಲ್ಲೆಯಲ್ಲಿ ಬೀಳುವ ಅಲ್ಪ ಸ್ವಲ್ಪ ಮಳೆಯನ್ನು ಕೆರೆಗಳ ಮೂಲಕ ಮತ್ತು ವಡ್ಡುಗಳ ಮೂಲಕ ಸಂಗ್ರಹಿಸುವ ಸ್ಥಳೀಯ ತಂತ್ರಗಳನ್ನು ಬಳಸಿದ ಬಹುಮುಖ್ಯ ಜಿಲ್ಲೆ ಇದು. ಮಳೆಗಾಲವೇ ಅಪರೂಪವಾಗುತ್ತಿರುವ ಈ ಸಂದರ್ಭದಲ್ಲಿ ನೀರು ಪೋಲಾಗದಂತೆ ಅಲ್ಲಲ್ಲಿ ತಡೆಗಟ್ಟಿಕೊಳ್ಳುವ ದೇಶೀ ತಂತ್ರಜ್ಞಾನವನ್ನು ಶತಮಾನಗಳ ಹಿಂದೆಯೇ ಕೋಲಾರದಲ್ಲಿ ಅಳವಡಿಸಲಾಗಿದೆ ಎಂಬುದೇ ತುಂಬಾ ಮಹತ್ವದ ವಿಚಾರ.

ಕೋಲಾರ ಆಂಧ್ರದ ಗಡಿಗೆ ಹೊಂದಿಕೊಂಡ ಜಿಲ್ಲೆಯಾದ್ದರಿಂದ ಸಹಜವಾಗಿಯೇ ಕನ್ನಡ ಮತ್ತು ತೆಲುಗು ಭಾಷೆಗಳೆರಡನ್ನು ಬಳಸುವ ದ್ವಿಭಾಷಿಕ ಪ್ರದೇಶ. ಅದೇ ಈ ಜಿಲ್ಲೆಯ ವಿಶಿಷ್ಟತೆ ಕೂಡ. ಸಾಮಾನ್ಯವಾಗಿ ನಾವು ಇದುವರೆಗೆ ಗಮನಿಸಿರುವಂತೆ ತಮಿಳುನಾಡು ಅಥವಾ ಮಹಾರಾಷ್ಟ್ರದ ಗಡಿ ಪ್ರದೇಶಗಳಲ್ಲಿ ಈ ಭಾಷಾ ಬಾಂಧವ್ಯ ಅಷ್ಟೇನು ಆರೋಗ್ಯಕರವಾಗಿಲ್ಲ. ಆದರೆ ಕನ್ನಡ ಮತ್ತು ತೆಲುಗು ಪ್ರದೇಶದ ಭಾಷಾ ಬಾಂಧವ್ಯ ಎಲ್ಲಾ ರಾಜ್ಯಗಳ ಗಡಿ ಪ್ರದೇಶಕ್ಕೂ ಮಾದರಿಯಾಗುವಂತೆ ಸುಮಧುರ ಸ್ಥಿತಿಯಲ್ಲಿದೆ. ಒಂದು ಅಂದಾಜಿನ ಪ್ರಕಾರ ಕೋಲಾರ ಜಿಲ್ಲೆಯಲ್ಲಿ ತೆಲುಗು ಮತ್ತು ಕನ್ನಡ ಮಾತನಾಡುವವರ ಜನಸಂಖ್ಯೆ ಸಮಪ್ರಮಾಣದಲ್ಲಿದೆ. ಇಲ್ಲಿನ ವಿಶೇಷವೆಂದರೆ ತೆಲುಗು ಮಾತೃಭಾಷೆಯ ಜನ ಕನ್ನಡವನ್ನೂ ಕನ್ನಡ ಮಾತೃಭಾಷೆಯ ಜನ ತೆಲುಗು ಭಾಷೆಯನ್ನು ಪ್ರೀತಿಯಿಂದ ಕಲಿತಿರುವುದು. ಅಷ್ಟೇ ಅಲ್ಲ, ಕನ್ನಡ ಮತ್ತು ತೆಲುಗು ಭಾಷೆಗಳೆರಡನ್ನು ಏಕಕಾಲದಲ್ಲಿ ಒಂದೇ ಭಾಷೆ ಎನ್ನುವಂತೆ ಸಮ್ಮಿಶ್ರಗೊಳಿಸಿ ನಿರರ್ಗಳವಾಗಿ ಮಾತನಾಡುವ ಸಂದರ್ಭಗಳು ಉಂಟು.

ISSN : 3048-7137

ಕೋಲಾರ ಜಿಲ್ಲೆಯಲ್ಲಿ ಬೇರೆ ಜಿಲ್ಲೆಗಳಲ್ಲಿ ಇರುವಂತೆಯೇ ಹಲವು ಜಾತಿ, ಮತ, ಪಂಥಗಳಿವೆ. ಆದರೆ ಈ ಯಾವ ಜಾತಿ, ಧರ್ಮ, ಮತ, ಪಂಥಗಳು, ಭಾಷೆಯ ಬೆಳವಣಿಗೆಗೆ ಅಥವಾ ಸಾಂಸ್ಕೃತಿಕ ಬಾಂಧವ್ಯಕ್ಕೆ ಅಡ್ಡಿಯಾಗಿಲ್ಲ. ಎಲ್ಲಾ ಜಾತಿಯ ಜನರು ಕೋಲಾರ ಜಿಲ್ಲೆಯಲ್ಲಿಯೂ ಇದ್ದಾರೆ. ಪಕ್ಕದ ಗಡಿ ಜಿಲ್ಲೆಗಳಲ್ಲಿಯೂ ಇದ್ದಾರೆ. ಆದ್ದರಿಂದ ಈ ಎರಡು ರಾಜ್ಯಗಳ ಗಡಿ ಎಂಬ ವಿಷಯವನ್ನು ಮರೆತು ಕೌಟುಂಬಿಕ ಸಂಬಂಧಗಳು, ಸಾಮಾಜಿಕ ಸಂಬಂಧಗಳು, ಸಾಂಸ್ಕೃತಿಕ ಸಂಬಂಧಗಳು ಯಾವುದೇ ಅಡೆತಡೆ ಇಲ್ಲದೇ ಬೆಳೆದಿವೆ. ಈ ಎಲ್ಲ ದೃಷ್ಟಿಯಿಂದ ಕೋಲಾರ ಒಂದು ವಿಶಿಷ್ಟ ಭಾಷಾ ಪ್ರದೇಶ ಹಾಗೆಯೇ ಒಂದು ವಿಶಿಷ್ಟ ಸಾಂಸ್ಕೃತಿಕ ಪ್ರದೇಶ.

ಕೋಲಾರ ಜಿಲ್ಲೆ ಇತ್ತೀಚಿನ ವರ್ಷಗಳಲ್ಲಿ ಅನೇಕ ಬದಲಾವಣೆಗಳನ್ನು ಕಂಡಿದೆ. ಸ್ವಾತಂತ್ರ್ಯಪೂರ್ವದಲ್ಲಿ ಸ್ವಾತಂತ್ರ್ಯ ಹೋರಾಟಕ್ಕಾಗಿ ಹೇಗೆ ತನ್ನ ಕಾಣಿಕೆಯನ್ನು ನೀಡಿತೋ ಹಾಗೆಯೇ ಸ್ವಾತಂತ್ರ್ಯಾ ನಂತರದಲ್ಲಿ ತನ್ನ ಸೇವೆಯನ್ನು ವಿವಿಧ ರಂಗಗಳಲ್ಲಿ ರಾಜ್ಯಕ್ಕೆ ಒದಗಿಸಿದೆ.

ವಿಧುರಾಶ್ವತ್ಥದಲ್ಲಿ ನಡೆದ ಬ್ರಿಟಿಷರ ಹೋರಾಟ ದೇಶಾದ್ಯಂತ ಕೋಲಾರ ಜಿಲ್ಲೆಯ ಕೀರ್ತಿಗೆ ಕಾರಣವಾಗಿದೆ. ಆಧುನಿಕ ಕರ್ನಾಟಕ ಶಿಲ್ಪಿ ಎಂದೇ ಹೆಸರಾದ ಸರ್.ಎಂ. ವಿಶ್ವೇಶ್ವರಯ್ಯರವರು ಕೋಲಾರ ಜಿಲ್ಲೆಯವರು. ಸುಪ್ರಸಿದ್ಧ ಅನುಭಾವಿ ಮತ್ತು ಕವಿ ಎಂದೇ ಹೆಸರಾದ ಸಂತ ಕೈವಾರ ತಾತಯ್ಯನವರು ಕೋಲಾರ ಜಿಲ್ಲೆಯವರು. ರಾಜಕಾರಣದಲ್ಲಿ ವೈಶಿಷ್ಟ್ಯಪೂರ್ಣ ಹೆಸರು ಮಾಡಿದ ಶ್ರೀ ಕೆ.ಸಿ. ರೆಡ್ಡಿಯವರು ಸ್ವತಂತ್ರ ಕರ್ನಾಟಕದ ಪ್ರಥಮ ಮುಖ್ಯಮಂತ್ರಿ. ಅಂದಿನಿಂದ ಇಂದಿನವರೆಗೆ ಕರ್ನಾಟಕ ರಾಜಕಾರಣದಲ್ಲಿ ಸಾಮಾಜಿಕ ಕ್ಷೇತ್ರದಲ್ಲಿ ಅನೇಕ ಗಣ್ಯರು ತಮ್ಮ ಚಾಪುಗಳನ್ನು ಒತ್ತಿದ್ದಾರೆ. ಆಧುನಿಕ ತಂತ್ರಜ್ಞಾನದ ಫಲವಾಗಿ ಕೃಷಿಯಲ್ಲಿ ಕ್ರಾಂತಿಕಾರಕ ಬದಲಾವಣೆಗಳೇ ಆಗಿದ್ದು ಅಪೂರ್ವ ವಾಣಿಜ್ಯ ಬೆಳೆಗಳನ್ನು ತೆಗೆಯುವ ಕೇಂದ್ರವಾಗಿ ಕೋಲಾರ ಮಾರ್ಪಟ್ಟಿದೆ. ರೇಷ್ಮೆ ಬೆಳೆಯ ಉತ್ತುಂಗ ಶ್ರೇಣಿಯಲ್ಲಿ ಕೋಲಾರ ನಿಂತಿದೆ. ತರಕಾರಿ ಮತ್ತು ದ್ರಾಕ್ಷಿ ಬೆಳೆಯಲ್ಲಿ ಕೋಲಾರವೇ ಮುಂದು. ಕ್ಷೀರ ಕ್ಷೇತ್ರದಲ್ಲಿಯೂ ಕೋಲಾರವೇ ಮುಂದು. ಹೀಗೆ ಬೆಂಗಳೂರು ನಗರದ ಮತ್ತು ಕರ್ನಾಟಕ ರಾಜ್ಯದ ಅನೇಕ ಅಗತ್ಯಗಳನ್ನು ಕೋಲಾರ ಪೂರೈಸುತ್ತಿದೆ. ಇಷ್ಟೆ ಅಲ್ಲದೆ ಕೋಲಾರದ ಚಿನ್ನದ ಗಣಿ ಒಂದು ಕಾಲಕ್ಕೆ ಇಡೀ ಪ್ರಪಂಚದ ಆಳವಾದ ಗಣಿಗಳಲ್ಲಿ ಒಂದಾಗಿದ್ದು ದೇಶದ ಆರ್ಥಿಕ ಸುಭದ್ರತೆಗೆ ಕಾರಣವಾಗಿದೆ. ಇಷ್ಟೆಲ್ಲಾ ಸಾಧನೆಗಳಿಗೆ ಕಾರಣ ಕೋಲಾರದ ಜನ

ಶ್ರಮ ಜೀವಿಗಳು ಮತ್ತು ಕಷ್ಟ ಸಹಿಷ್ಣುಗಳು ಆಗಿರುವುದೇ ಕಾರಣ. ಕಾಲದಿಂದಲೂ ಒಣಭೂಮಿಯನ್ನು ಬೇಸಾಯ ಮಾಡಿಕೊಂಡುಬಂದ ಇಲ್ಲಿನ ಜನ ಸಹಜವಾಗಿಯೇ ಮಣ್ಣಿನ ಮಕ್ಕಳು.

ಇಂತಹ ಪರಂಪರೆಯಿರುವ ಕೋಲಾರ ಜಿಲ್ಲೆಯಲ್ಲಿ ಈಗಾಗಲೇ ಹೇಳಿದಂತೆ ಎಲ್ಲ ಜಾತಿ ಧರ್ಮಗಳ ಜನರಿದ್ದಾರೆ. ಅದರಲ್ಲಿಯೂ ಕೃಷಿಕರು, ದಲಿತರು ಮತ್ತು ಹಿಂದುಳಿದ ವರ್ಗಗಳ ಜನರೇ ಅಧಿಕ. ಎಲ್ಲಿ ಈ ಜನವರ್ಗ ಹೆಚ್ಚಾಗಿರುತ್ತದೆಯೋ ಅಂತಹ ಕಡೆಗೆ ಜಾನಪದವು ಸಮೃದ್ಧವಾಗಿರುತ್ತದೆ. ಕೋಲಾರ ಜಿಲ್ಲೆ ಅನೇಕ ರೀತಿಯ ಬುಡಕಟ್ಟು ಜನಗಳ ತವರು ಹೌದು. ಅವರಲ್ಲಿ ಅಲೆಮಾರಿಗಳಿದ್ದಾರೆ, ದಲಿತರಿದ್ದಾರೆ, ಬುಡಕಟ್ಟುಗಳು ಇವೆ. ಹಾಗೇ ನೋಡಿದರೆ ಕೃಷಿಕರು ಕೂಡ ಒಂದು ಕಾಲಕ್ಕೆ ಅಲೆಮಾರಿಗಳೇ. ಅಲೆಮಾರಿ ಜೀವನವೇ ಪ್ರಮುಖವಾಗಿದ್ದಾಗ ಕರ್ನಾಟಕದಿಂದ ಆಂಧ್ರದ ಕಡೆಗೂ, ಆಂಧ್ರದಿಂದ ಕರ್ನಾಟಕದ ಕಡೆಗೂ ವಲಸೆ ಹೋದ ಜನವರ್ಗಗಳು ಅದೆಷ್ಟೋ. ಆದರೆ ಒಂದು ವಿಶೇಷವೆಂದರೆ ಕರ್ನಾಟಕ ಮತ್ತು ಆಂಧ್ರದ ನಡುವಿನ ಈ ಸಾಂಸ್ಕೃತಿಕ ವಲಸೆಗೆ ಕೇಂದ್ರ ಸ್ಥಾನವಾಗಿದ್ದುದು ಕೋಲಾರ. ಬೆಂಗಳೂರಿನ ನಿರ್ಮಾತೃ ಮಾಗಡಿ ಕೆಂಪೇಗೌಡ ತಮಿಳುನಾಡಿನಿಂದ ಹೊರಟು ಕೋಲಾರ ಜಿಲ್ಲೆಯ ಮೂಲಕ ಮಾಗಡಿಗೆ ಬಂದು ನೆಲಗೊಂಡ ಎಂಬ ಪ್ರತೀತಿಯು ಇದಕ್ಕೆ ಸಾಕ್ಷಿ. ಹಾಗೆಯೇ ನಾಯಕರು, ಕಾಡುಗೊಲ್ಲರು, ದೊಂಬರು, ಮ್ಯಾಸ ಬೇಡರು, ಚೆಂಚುಗಳು, ಕೊಂಡಮಾಮ, ಸುಡುಗಾಡುಸಿದ್ದರು ಹೀಗೆ ಅಲೆಮಾರಿ ಜನರು ಇಲ್ಲಿಂದ ಅಲ್ಲಿಗೂ ಅಲ್ಲಿಂದ ಇಲ್ಲಿಗೂ ಪ್ರಯಾಣ ಮಾಡಿದ್ದಾರೆ ಎಂದು ತಿಳಿದುಬರುತ್ತದೆ.

ಇಂದು ಸ್ಥಿರವಾಗಿ ನಿಂತ ಜನಸಮುದಾಯಗಳೇ ನಮಗೆ ಹೆಚ್ಚಾಗಿ ಕಾಣುತ್ತವೆ. ಆದರೆ ಒಂದಾನೊಂದು ಕಾಲದಲ್ಲಿ ಮೇಲೆ ವಿವರಿಸಿದಂತೆ ಅಲೆಮಾರಿಗಳಾದ ಜನವರ್ಗ ತಮ್ಮ ಪ್ರಯಾಣದ ನಡುವೆ ಅಲ್ಲಿಯ ಕಲೆ ಮತ್ತು ಸಂಸ್ಕೃತಿಯನ್ನು ಅಲ್ಲಿಗೂ ಇಲ್ಲಿಗೂ ರವಾನಿಸಿದ್ದಾರೆ. ಈ ಸಾಂಸ್ಕೃತಿಕ ಕೊಳು–ಕೊಡುಗೆ ಒಂದು–ಎರಡು ವರ್ಷದ್ದಲ್ಲ. ಶತಶತಮಾನಗಳಿಂದ ನಡೆದು ಬಂದಿದ್ದು, ಈ ಕೊಳು–ಕೊಡುಗೆಯ ದ್ಯೋತಕವಾಗಿ ಇಂದು ನಮ್ಮಲ್ಲಿ ಕೇಳಿಕೆ, ಗೊಂಬೆಯಾಟ, ಬುರ್ರಕಥ, ಕೊಂಡಮಾಮ, ಪಂಡರಿಭಜನೆ, ಹುಲಿವೇಷ, ಕರಗ, ದೊಂಬರಾಟ, ಕೋತಿ ಬಸವ, ಪಾಳ್ಯಗಾರ ವೇಷ, ತತ್ವಪದ, ಸಿಂಧುಮಾದಿಗರ ವೇಷ ಮುಂತಾದ ಅನೇಕ ಕಲೆಗಳು ಬೇರೆಡೆಗಿಂತ ಇಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತವೆ. ಕೋಲಾರ ಜಿಲ್ಲೆ ಜನಪದ ಹಾಡುಗಾರರಿಗೆ ಕಲಾವಿದರಿಗೆ ಅನೇಕ ರೀತಿಯ ಪ್ರದರ್ಶನಕಾರರಿಗೆ

ISSN : 3048-7137

ಮೊದಲಿನಿಂದಲೂ ಪ್ರೋತ್ಸಾಹ ನೀಡುತ್ತಾ ಬಂದಿದೆ, ಇವತ್ತಿನ ಆಧುನಿಕ ಸಮಾಜದಲ್ಲಿಯು ಕೂಡ ಕೋಲಾರ ಜಿಲ್ಲೆಯಾದ್ಯಂತ ಹತ್ತಾರು ಕಲೆಗಳನ್ನು ಪ್ರತಿನಿಧಿಸುವ ಸಾವಿರಾರು ಕಲಾವಿದರು ಕಂಡುಬರುತ್ತಾರೆ.

## ಆ. ಕೇಳಿಕೆಯ ಉಗಮ ಮತ್ತು ವಿಕಾಸ

"ಕೇಳಿಕೆ" ಒಂದು ಅಚ್ಚಕನ್ನಡ ಪದ. ತೆಲುಗಿನಲ್ಲಿ ಕೇಳಿಕೆ ಎಂಬ ಬೇರೆ ಅರ್ಥ ಬರುವ ಪದ ಇದ್ದಂತಿಲ್ಲ. ಆದ್ದರಿಂದ ಕೇಳಿಕೆ ಎಂದರೆ ಪ್ರಸಂಗವೊಂದನ್ನು ಅಥವಾ ಕಥೆಯೊಂದನ್ನು ಅಥವಾ ಸನ್ನಿವೇಶವೊಂದನ್ನು ಮತ್ತೊಬ್ಬರ ಮೂಲಕ ಕುಂತು ಕೇಳುವುದು ಎಂದು ಅರ್ಥೈಸಬಹುದಾಗಿದೆ. ಹಾಗಿದ್ದಲ್ಲಿ ಇಂದು ರಂಗರೂಪ ದಲ್ಲಿರುವ ಕೇಳಿಕೆ ಮೊದಲಿಗೆ ಬರಿ ಕಥೆಯ ರೂಪದಲ್ಲಿ ಅಥವಾ ಹಾಡಿನ ರೂಪದಲ್ಲಿ ಕೇಳಿಸಿಕೊಳ್ಳುವುದು ಮಾತ್ರವೇ ಆಗಿತ್ತೇ? ಇದೊಂದು ಕುತೂಹಲಕರ ಪ್ರಶ್ನೆ. ಇದು ಒಂದು ಕಾಲಕ್ಕೆ ಕೇವಲ ಹೇಳುವ ಮತ್ತು ಕೇಳುವ ಪರಂಪರೆ ಮಾತ್ರವಾಗಿತ್ತು ಎಂದು ಊಹಿಸಿದರೆ ತಪ್ಪೇನು ಆಗಲಾರದು. ಬಹು ಪ್ರಾಚೀನದಿಂದ ನಮ್ಮ ಜನಪದ ಕಥನ ಪರಂಪರೆ ಆ ಕೆಲಸ ಮಾಡುತ್ತಾ ಬಂದಿದೆ. ಕರ್ನಾಟಕದಲ್ಲಿ ಇಂದೂ ಚಾಲ್ತಿಯಲ್ಲಿರುವ ವೃತ್ತಿ ಗಾಯಕ ಪರಂಪರೆಯ ಅನೇಕ ಕಲಾವಿದರು ಈ ಹೇಳುವ ಮತ್ತು ಕೇಳುವ ಪರಂಪರೆಯನ್ನು ಮುಂದುವರಿಸಿ ಕೊಂಡು ಬರುತ್ತಿದ್ದಾರೆ. ಹಾಗೆ ಹೇಳುವ ಸ್ವರೂಪದಲ್ಲಿರುವ ಕಥನ ಮಾದರಿಗಳನ್ನು ಇಲ್ಲಿ ಗಮನಿಸಬಹುದು. ಕರ್ನಾಟಕದಲ್ಲಿ ಬಹು ಪ್ರಸಿದ್ಧವಾಗಿರುವ ಚೌಡಿಕೆ ಮೇಳ ಎದುರಿಗಿರುವ ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು ಯಲ್ಲಮ್ಮನ ಕಥನವನ್ನು ನಿರೂಪಿಸುತ್ತ ಹೋಗುತ್ತದೆ. ಸಣ್ಣ ಅಭಿನಯ, ಲಘು ನರ್ತನ, ಮತ್ತು ಹಿಮ್ಮೇಳ ಮುಮ್ಮೇಳದವರ ನಡುವಿನ ಕೊಂಚ ಸಂಭಾಷಣೆ ಈ ಕಥನ ಕ್ರಮಗಳಲ್ಲಿ ಕಂಡುಬರುತ್ತದೆ. ಹಾಗೆಯೇ ಕಿನ್ನರಿಜೋಗಿ ಮೇಳ, ಕರಪಾಲ ಮೇಳ, ಗೊಂದಲಿಗರ ಮೇಳ ಮುಂತಾದ ಕಥನ ಮೇಳಗಳೆಲ್ಲವು ಹೇಳುವ ಮತ್ತು ಕೇಳುವ ಕ್ರಮಗಳಾಗಿವೇ ಕಂಡು ಬರುತ್ತವೆ. ಇದೇ ರೀತಿಯ ಲಕ್ಷಣಗಳನ್ನು ನಿಚ್ಚಳವಾಗಿ ಉಳ್ಳ ಆಂಧ್ರದ ಬುರ್ರಕಥ ಮೇಳ ಈ ರೀತಿಯ ಹೇಳುವ ಮತ್ತು ಕೇಳುವ ಪರಂಪರೆಯ ಉನ್ನತ ಕೌಶಲವನ್ನು ಮೈಗೂಡಿಸಿ ಕೊಂಡು ಬೆಳೆದುಬಂದಿದೆ. ಬುರ್ರಕಥ ಮೇಳದಲ್ಲಿ ಹೆಂಗಸರ ಮತ್ತು ಗಂಡಸರ ಎರಡೂ ತಂಡಗಳು ಇವೆ. ಕರ್ನಾಟಕದಲ್ಲಿ ಕನ್ನಡದಲ್ಲಿಯೇ ಬುರ್ರಕಥೆಯನ್ನು ಮಾಡುವ ಕೆಲವು ಪ್ರಸಿದ್ಧ ತಂಡಗಳಿವೆ ಎಂಬುದನ್ನು ಗಮನಿಸಬೇಕು. ಬಳ್ಳಾರಿ ಜಿಲ್ಲೆ ದರೋಜಿಯ ಬುರ್ರಕಥ ಈರಮ್ಮ ಮತ್ತು ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನಲ್ಲಿ ಸದ್ಯಕ್ಕೆ ನೆಲೆಸಿರುವ

ಬುರ್ರಕಥ ಜಯಮ್ಮ ಇದಕ್ಕೆ ಉದಾಹರಣೆ. ಮುಖ್ಯ ಗಾಯಕಿ ಅಥವಾ ಗಾಯಕ ಚಂಪೂ ಶೈಲಿಯಲ್ಲಿ ಅಂದರೆ ಸುಶ್ರಾವ್ಯವಾದ ಹಾಡು ಮತ್ತು ಸಂಭಾಷಣೆಗಳ ಮೂಲಕ ಕಥೆಯೊಂದನ್ನು ನಿರೂಪಿಸುತ್ತಾ ಹೋಗುವ ಕ್ರಮ ಅತ್ಯದ್ಭುತವಾದದು. ಇಲ್ಲಿಯೂ ಸಣ್ಣ ನರ್ತನವಿರುತ್ತದೆ. ಸಂದರ್ಭಕ್ಕೆ ತಕ್ಕಹಾಗೆ ಅಭಿನಯ ಪೂರಕವಾದ ಆಕರ್ಷಕ ಭಂಗಿ ಇರುತ್ತದೆ. ಜೊತೆಗೆ ಸುಮಧುರವಾದ ಹಿಮ್ಮೇಳ ವಿರುತ್ತದೆ. ಸಂಗೀತ, ಸಾಹಿತ್ಯ ಮತ್ತು ಲಘು ನೃತ್ಯವಿರುವ ಈ ಕಥಾಮೇಳ ಇವತ್ತಿನ ಈ ಕೇಳಿಕೆಯ ರಂಗಪ್ರಕಾರದ ಮೂಲ ರೂಪ ಎಂದರೆ ಬಹುಶಃ ತಪ್ಪಾಗಲಾರದು. ಹೀಗೆ ಕೇಳುವ ಸಂಪ್ರದಾಯದ ಮೂಲಕ ನಡೆದುಬಂದ ಕಥನ ಮಾದರಿಯೊಂದು ತನ್ನ ಪರಿಧಿಯನ್ನು ವಿಸ್ತರಿಸಿಕೊಳ್ಳುತ್ತ ರಂಗ ಸಾಧ್ಯತೆಗಳನ್ನು ಕಂಡುಕೊಳ್ಳುತ್ತ ಮುಂದೆ ಕೇಳಿಕೆಯಂತಹ ಸರಳ ರಂಗಭೂಮಿಯ ಹಂತಕ್ಕೆ ಬಂದು ನಿಂತಿರಬಹುದೇ ಎಂದು ಊಹಿಸಬೇಕಾಗುತ್ತದೆ. ಯಾಕೆಂದರೆ ಇಂದು ಪ್ರದರ್ಶಿಸಲಾಗುವ ತಂಡಗಳನ್ನು ಗಮನಿಸುವಾಗ ಈ ಊಹೆ ತಪ್ಪಾಗಲಾರದೇನೋ, ಒಂದು ಹಿಮ್ಮೇಳ ಅದರಲ್ಲಿಯೂ ಹೆಂಗಸರು ಮತ್ತು ಗಂಡಸರು ಸೇರಿ ಹಾಡುವ ಹಿಮ್ಮೇಳಗಳೇ ಹೆಚ್ಚು. ಹಾಡಿನ ಶೈಲಿ ಮತ್ತು ಪೂರಕ ಸಂಗೀತ ಬುರ ಕಥಾ ಮಾದರಿಯದು. ಇದೇ ಕೇಳಿಕೆಯ ಪ್ರಾಚೀನ ರೂಪ ಎಂಬ ಕಲ್ಪನೆ ನನ್ನದು. ಇಂತಹ ಕಥನಮೇಳಕ್ಕೆ ಪೂರಕವಾಗಿ ಈಗಿನ ಕೇಳಿಕೆಯಲ್ಲಿ ಅನೇಕ ಪಾತ್ರಗಳು ಬಂದು ಹೋಗುತ್ತವೆ. ಯಕ್ಷಗಾನ ಅಥವಾ ಬಯಲಾಟ ರೂಪದ ಬಹುಭಾರವಾದ ಅಥವಾ ಕಣ್ಣು ಕೋರೈಸುವ ವೇಷಭೂಷಣಗಳು ಇಲ್ಲಿ ಇರುವುದಿಲ್ಲ. ಸಾಧಾರಣ ವೇಷಭೂಷಣ ಅದಕ್ಕೆ ತಕ್ಕಹಾಗೆ ಸರಳ ಮುಖವರ್ಣಿಕೆ, ಸರಳ ರೂಪದ ನರ್ತನ ಇಂತಹ ಎಲ್ಲ ಪಾತ್ರಗಳನ್ನು ಬೆಸೆಯುವ ಸದಾ ರಂಗದ ಮೇಲಿರುವ ಹಾಸ್ಯದ ಸೂತ್ರಧಾರಿ ಮತ್ತು ಅತ್ಯಂತ ಸರಳವಾದ ರಂಗಸಜ್ಜಿಕೆ– ಇವೆಲ್ಲವನ್ನು ಗಮನಿಸುವಾಗ ವೃತ್ತಿ ಕಲಾತಂಡಗಳು ಕೇಳಿಕೆ ಎಂಬ ಕಥನ ಸ್ವರೂಪದ ಪ್ರದರ್ಶನವನ್ನು ಆರಂಭದಲ್ಲಿ ಮಾಡುತ್ತಿದ್ದು ಬರಬರುತ್ತ ಈ ಮೇಲೆ ಹೇಳಿದ ಸ್ವರೂಪದಲ್ಲಿ ಒಂದೊಂದೇ ರಂಗ ಸಾಧ್ಯತೆಗಳನ್ನು ಅಳವಡಿಸಿಕೊಂಡು ಇವತ್ತಿನ ಕೇಳಿಕೆಯ ಮಟ್ಟಕ್ಕೆ ತಂದು ನಿಲ್ಲಿಸಿರಬಹುದೇ ಎಂಬುದನ್ನು ನಾವು ಗಂಭೀರವಾಗಿ ಆಲೋಚಿಸಬೇಕಾಗಿದೆ. ಇದು ಅನೇಕ ಪ್ರದರ್ಶನಗಳನ್ನು ಹತ್ತಿರದಿಂದ ಗಮನಿಸಿದ ನನ್ನ ಕಲ್ಪನೆ ಅಷ್ಟೆ. ಆದರೆ ಇದೇ ಅಂತಿಮ ಎಂಬ ಭ್ರಮೆ ನನ್ನದಲ್ಲ. ಯಾವ ಲಿಖಿತ ದಾಖಲೆಗಳು ಲಭ್ಯವಿಲ್ಲದಿರುವ ಕೇಳಿಕೆಯ ಉಗಮ ಮತ್ತು ವಿಕಾಸವನ್ನು ಕುರಿತು ಚರ್ಚಿಸುವಾಗ ಇಷ್ಟಾದರೂ ಊಹೆಯನ್ನು ಮಾಡಲೇ ಬೇಕಾಗುತ್ತದೆ ಮತ್ತು ಅದು ಅನಿವಾರ್ಯ ಕೂಡ ಎಂಬುದು ನನ್ನ ನಂಬಿಕೆ.

ISSN : 3048-7137

'ಕೇಳಿಕೆ' ಪದದ ನಿಷ್ಪತ್ತಿಯ ಬಗ್ಗೆ ಮತ್ತೊಂದು ಊಹೆಯನ್ನು ಮಾಡಲು ಅವಕಾಶವಿದೆ ಪ್ರಾಕೃತದ 'ಕೇಲ್' ಶಬ್ದದ ಮುಂದುವರೆದ ರೂಪವಾಗಿ ಇದು ಬಂದಿರಬಹುದೆ ಎಂದು ಊಹಿಸಲು ಅವಕಾಶವಿದೆ. ಸಂಸ್ಕೃತ ಕನ್ನಡ ಶಬ್ದಕೋಶದಲ್ಲಿ "ಕೇಲಕ" ಎಂಬ ಶಬ್ದಕ್ಕೆ ನರ್ತಕ, ನರ್ತನ ಮಾಡುವವನು, ಕುಣಿಯುವವನು, ಕತ್ತಿಯ ಅಲುಗಿನ ಮೇಲೆ ಕುಣಿಯು ವವನು ಮುಂತಾದ ಅರ್ಥಗಳಿವೆ. "ಕೇಲಿಕಲಾ" ಎಂಬ ಮತ್ತೊಂದು ಶಬ್ದಕ್ಕೆ ಕ್ರೀಡಾವಿದ್ಯೆ, ಆಟದ ಕಲೆ, ಆಟದಲ್ಲಿ ಜಾಣೆ ಮುಂತಾದ ಅರ್ಥಗಳಿವೆ. "ದಶರೂಪಕಗಳಲ್ಲಿ ಕೇಲಿಕಾ ಒಂದು ಉಪರೂಪಕವಾಗಿದ್ದು 'ಕೇಳಿಕೆ' ರಂಗಕಲೆ ಆ ಉಪರೂಪಕಗಳಲ್ಲಿ ಒಂದಿರಬಹುದೆ ಎಂಬ ಸಂಶಯವು ಉಂಟಾಗುತ್ತದೆ. ಏನೇ ಇದ್ದರೂ ಇದು ಇನ್ನೂ ಹೆಚ್ಚಿನ ಸಂಶೋಧನೆಯಿಂದ ಮಾತ್ರ ಸ್ಪಷ್ಟವಾಗುವ ವಿಚಾರವೆಂಬುದು ನನ್ನ ಅಭಿಪ್ರಾಯವಾಗಿದೆ.

ಕೇಳಿಕೆ ರಂಗ ಪ್ರಕಾರ ಇವತ್ತಿನ ಈ ಸ್ಥಿತಿಗೆ ಬರಲು ಮತ್ತೊಂದು ಪರಂಪರೆ ಸಹಾಯ ಮಾಡಿದೆ ಅನಿಸುತ್ತದೆ. ಅದು ಯಾವುದೆಂದರೆ ಕರ್ನಾಟಕ ಮತ್ತು ಆಂಧ್ರದ ಗಡಿ ಜಿಲ್ಲೆಗಳಲ್ಲೇ ಕಾಣಿಸಿಕೊಳ್ಳುವ ಹಗಲುವೇಷಗಾರರು ಅಥವಾ ಬಹುರೂಪಿಗಳ ಕೊಡುಗೆ ಎಂದು ಹೇಳಬಹುದು. ಬಹುರೂಪಿಗಳು ಅಥವಾ ಹಗಲು ವೇಷಗಾರರು ಕರ್ನಾಟಕದ ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳ ಗಡಿಭಾಗದಲ್ಲಿ ಕಂಡುಬರುತ್ತಾರೆ. ಇವರು ವಿವಿಧ ವೇಷಗಳನ್ನು ಹಾಕಿಕೊಂಡು, ವಿವಿಧ ಊರುಗಳಿಗೆ ಹೋಗುತ್ತಾರೆ. ಊರಿನ ಪ್ರತಿಯೊಂದು ಮನೆಗೂ ಹೋಗಿ ಅಥವಾ ಊರಿನ ಬೀದಿ ಬೀದಿಗಳಲ್ಲಿ ಪ್ರದರ್ಶನ ನೀಡುತ್ತಾರೆ. ತಂಬೂರಿ ಮತ್ತು ಡಮಕಿಗಳನ್ನು ಬಾರಿಸುತ್ತ ಗಂಗೇಗೌರಿ, ಬಾಲನಾಗಮ್ಮ ಮುಂತಾದ ಕಥೆಗಳನ್ನು ಹಾಡುತ್ತಾರೆ. ಸಾಮಾನ್ಯವಾಗಿ ಇವರು ಬೈರಾಗಿ, ಜಂಗಮ, ಅಗಸ, ದಾಸ, ಪೊಲೀಸ್, ಬೇಡ ಐನೂರು, ಪಾಳೆಗಾರ, ಅರ್ಧನಾರೀಶ್ವರ, ಭಸ್ಮಾಸುರ, ಆಂಜನೇಯ, ವಾಲಿ, ಸುಗ್ರೀವ, ಭೀಮ ಇತ್ಯಾದಿ 33 ವೇಷಗಳನ್ನು ಹಾಕುತ್ತಾರೆ ಎಂದು ಹೇಳಲಾಗುತ್ತಿದೆ. ಮಧುರ ಕಂಠಗಳಿಂದ ಹಾಡುವ ಇವರು ತಂಬೂರಿ, ಬುಡುಗ, ಗಗ್ಗರ, ಹಾನಿಯಂ ಹಾಗೂ ತಬಲ ಮುಂತಾದ ಉಪಕರಣಗಳನ್ನು ಬಳಸುತ್ತಾರೆ. ಇವರ ಬಹುಮುಖ್ಯವಾದ ಸಾಂಪ್ರದಾಯಿಕ ವಾದ್ಯವೆಂದರೆ ಬುಡುಗ, ಚರ್ಮದಿಂದ ಮುಚ್ಚಿದ ಒಂದು ಅಗಲವಾದ ಬಾಯನ್ನು ಮಾಡಿ ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಸಣ್ಣ ಬಾಯನ್ನು ಹೊಂದಿರುವ ಹಿತ್ತಾಳೆ ಕೊಳವೆಗೆ ಬುಡುಗ ಎನ್ನುತ್ತಾರೆ. ಇದು ಮಧ್ಯದಲ್ಲಿ ಮಡಕೆಯಂತೆ ಉಬ್ಬಿರುತ್ತದೆ. ಬಲಗೈಯಿಂದ

ಅಗಲಬಾಯಿಯ ಚರ್ಮದ ಮೇಲೆ ಹೊಡೆಯುತ್ತಾ ಎಡಭಾಗದ ಸಣ್ಣ ಬಾಯನ್ನು ಎಡಕೈಯಿಂದ ಮುಚ್ಚಿ ಮುಚ್ಚಿ ತೆಗೆಯುತ್ತಿದ್ದರೆ ಒಳ್ಳೆ ಇಂಪಾದ ನಾದ ಉಂಟಾಗುತ್ತದೆ. ಹಗಲು ವೇಷಗಾರರು ವೇಷಗಳನ್ನು ಹಾಕಿದಾಗ ಅವರ ಉಡುಗೆ ತೊಡುಗೆಗಳು ರಂಗುರಂಗಿನಿಂದ ಕೂಡಿರುತ್ತವೆ. ಬಣ್ಣ ಬಣ್ಣದ ಸೀರೆಗಳನ್ನು ಗಂಡಸರು ಕೂಡ ಕಚ್ಚೆ ಹಾಕಿ ಕಟ್ಟುತ್ತಾರೆ. ಸೀರೆಗಳಿಗೆ ಮತ್ತು ರವಿಕೆಗಳ ಅಂಚಿಗೆ ನಕ್ಕಿಟೇಪುಗಳನ್ನು ಹೊಲಿದಿರುತ್ತಾರೆ. ಗೀಲೀಟಿನ ಒಡವೆಗಳನ್ನು ಧರಿಸುತ್ತಾರೆ. ತೆಳುವಾದ ತಗಡನ್ನು ಚಿತ್ತಾಕರ್ಷಕವಾಗಿ ಕತ್ತರಿಸಿ ಅದಕ್ಕೆ ಬಂಗಾರವರ್ಣದ ಚಿನ್ನಾರಿಪುಡಿಯನ್ನು ಮಿಶ್ರಮಾಡಿ ಸಿಲ್ವರ್ ಪೇಂಟ್ ಬಳಿದು, ಮೇಲ್ ತುದಿಗೆ ಬಣ್ಣದಲ್ಲಿ ಅದ್ದಿ ಒಣಗಿಸಿದ ಮತ್ತು ಕೋಳಿಪುಕ್ಕವನ್ನು ಸಿಕ್ಕಿಸಿದ ತಗಡನ್ನು ತಲೆಗೆ ಹೊಂದಿಕೊಳ್ಳುವಂತೆ ಸುತ್ತಿಕೊಳ್ಳುತ್ತಾರೆ. ಇದನ್ನೇ ಮುಕುಟ ಅಥವಾ ಕಿರೀಟವೆಂದು ಕರೆಯುತ್ತಾರೆ. ಕುದುರೆ ಬಾಲದ ಕೂದಲಿನಿಂದ ಗಡ್ಡವನ್ನು, ಕುರಿಯ ತುಪ್ಪಟದಿಂದ ಮೀಸೆಯನ್ನು ಮಾಡಿ ದಾರದಿಂದ ಕಟ್ಟಿಕೊಳ್ಳುತ್ತಾರೆ. ಇಂತಹ ವೇಷಗಳನ್ನು ಹಾಕಿಕೊಂಡು ಅನೇಕ ರೀತಿಯ ಹಾಡುಗಳನ್ನು ಹಾಡುತ್ತಾ ತಿರುಗಾಡುವ ಇವರ ವೃತ್ತಿ ಮತ್ತು ಸಂಪ್ರದಾಯ ತುಂಬಾ ವಿಶೇಷವಾದದು.

ಈ ಮೇಲ್ಕಾಣಿಸಿದ ವಿವರಗಳನ್ನು ನೀಡಲು ಕಾರಣವಿದೆ. ಬಹುಶಃ ಬುರ‍್ರಕಥದ ಕಥನ ಮಾದರಿಯ ಮುಂದಿನ ಹಂತವಾಗಿ ಈ ವೇಷಗಳು ಸೇರಿಕೊಂಡಿರುವಂತಿದೆ. ಈ ವೇಷಗಳನ್ನು ಹಾಕುವವರಿಗೆ ಬುಡುಗ ಜಂಗಮರೆಂದು ಹೇಳುವುದು ಉಂಟು. ಈ ಬುಡಗ ಜಂಗಮರೇ ಅಧಿಕ ಸಂಖ್ಯೆಯಲ್ಲಿ ಬುರ‍್ರಕಥ ಕಥನಕಾರರು ಹೌದು. ಕೇಳಿಕೆಯ ವೇಷಗಳು ಮತ್ತು ಸರಳರೂಪದ ರಂಗ ಸಂಪ್ರದಾಯಗಳನ್ನು ನೋಡುವಾಗ ಈ ವೇಷಗಾರರ ಪ್ರಭಾವ ಕೇಳಿಕೆಯ ಮೇಲೆ ಅಪಾರ ಪ್ರಮಾಣದಲ್ಲಿ ಆಗಿ ವೇಷಗಾರರ ಈ ವೃತ್ತಿಸಂಪ್ರದಾಯ ಒಂದು ರಂಗರೂಪವನ್ನು ಪಡೆದುಕೊಂಡು ಇವತ್ತಿನ ಕೇಳಿಕೆ ಆಗಿರಬಾರದೇಕೆ? ಎಂಬುದನ್ನು ಊಹಿಸಿದರೆ ತಪ್ಪೇನು ಆಗಲಾರದು.

ಕೇಳಿಕೆ ರಂಗ ಪ್ರಕಾರವನ್ನು ಇನ್ನಷ್ಟು ಸೂಕ್ಷ್ಮವಾಗಿ ಗಮನಿಸಿದರೆ ಅದು ಕೋಲಾರ ಜಿಲ್ಲೆಯ ಸುತ್ತಮುತ್ತ ಇರುವ ಪ್ರದೇಶಗಳಲ್ಲಿ ಪ್ರಚಲಿತವಿರುವ ಮೂಡಲಪಾಯ ಯಕ್ಷಗಾನದ ಕೆಲವು ಅಂಶಗಳನ್ನು ತನ್ನೊಳಗೆ ತೆಗೆದುಕೊಂಡು ತನ್ನ ರೂಪವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಂಡಿರುವ ಸಂಭವ ಕಂಡುಬರುತ್ತದೆ. ಉದಾಹರಣೆಗೆ 'ಬುಡಗ ಜಂಗಾಲ' ಜನಾಂಗದವರು ನಡೆಸಿಕೊಡುವ ಕೇಳಿಕೆ, ಈಗಾಗಲೇ ವಿವರಿಸಿದ ರೀತಿಯಲ್ಲಿ ಸಾಮಾನ್ಯ ಸರಳ ಸ್ವರೂಪದ ಬುರ‍್ರಕಥ

ISSN : 3048-7137

ಮಾದರಿಗೆ ಹತ್ತಿರವಾದ ರಂಗ ಸಂಪ್ರದಾಯವಾಗಿದೆ. ಆದರೆ ಇತರ ಕೃಷಿಮೂಲದ ಜನವರ್ಗ ಅಂದರೆ ಒಕ್ಕಲಿಗರು, ಕೇಳಿಕೆ ಎಂಬ ಹೆಸರಿನಲ್ಲಿ ಪ್ರದರ್ಶಿಸುವ ರಂಗದಲ್ಲಿ ಮೂಡಲಪಾಯ ಯಕ್ಷಗಾನದ ವೇಷಭೂಷಣ, ಹೆಜ್ಜೆ ಮತ್ತು ಸಂಗೀತ ಸಂಪ್ರದಾಯಗಳ ಪ್ರಭಾವ ಆಗಿರುವುದು ಕಂಡುಬರುತ್ತದೆ. ಪ್ರಸಂಗಗಳನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭಗಳನ್ನು ನೋಡಿದಾಗಲೂ ನಿಶ್ಚಲವಾಗಿ ಕಾಣುವ ಅಂಶವೇನೆಂದರೆ ತೆಲುಗು ಮೂಲದ ಹಾಗೂ ಆಂಧ್ರದ ಮೂಲಕಥೆಗಳಾದ ದೇಶಿಂಗರಾಜ ಕಥೆ, ಕಾಂಬೋಜರಾಜ ಕಥೆ, ಸಾಸಲು ಚಿನ್ನಮ್ಮ, ಮುಗ್ಗುರು ಮರಾಠಿಲು, ನಲ್ಲ ತಂಗ, ಬಾಲನಾಗಮ್ಮ ಇಂತಹ ಕಥಾವಸ್ತುಗಳನ್ನು ತೆಗೆದು ಕೊಂಡರೆ ಕನ್ನಡ ಮೂಲದ ಕೇಳಿಕೆಗಳು ಮೂಡಲಪಾಯದಲ್ಲಿ ಕಂಡುಬರುವ ಕರಿಭಂಟ, ಭಕ್ತಮಾರ್ಕಂಡೇಯ, ಭಕ್ತ ಪ್ರಹ್ಲಾದ, ವಿರಾಟಪರ್ವ, ನಳಚರಿತ್ರೆ ಮುಂತಾದ ಪ್ರಸಂಗಗಳನ್ನು ಆಯ್ಕೆ ಮಾಡಿಕೊಂಡಿರುವುದು ಕಂಡುಬರುತ್ತದೆ. ಆದರೆ ಕೇಳಿಕೆಯ ಪ್ರದರ್ಶನ ಬಹುಭಾಗಗಳಲ್ಲಿ ತೆಲುಗು ಭಾಷೆಯಲ್ಲಿ ನಡೆಯುವು ದರಿಂದ ಹಾಗೂ ಇದರ ಮೂಲ ಸ್ವರೂಪ ಕೃಷಿ ಮೂಲದ ಜನವರ್ಗಗಳಿಗಿಂತ ಬುಡಕಟ್ಟು ಮೂಲದ ಅಲೆಮಾರಿ ಜನವರ್ಗಗಳಲ್ಲಿಯೇ ಹೆಚ್ಚು ಅಧಿಕೃತವಾಗಿ ಕಾಣ ಬರುವುದರಿಂದ ಕೇಳಿಕೆ ಜನಪದ ಕಥನ ಕ್ರಮದಿಂದಲೇ ಬೆಳೆದು ಬಂದ ಕಲೆ. ಆದ್ದರಿಂದಲೇ ಅದಕ್ಕೆ ಕೇಳಿಕೆ ಎಂಬ ಹೆಸರನ್ನು ನೀಡಿರಬಹುದು ಎಂದು ಊಹಿಸಬಹುದಾಗಿದೆ.

ಕೇಳಿಕೆಯ ಮೂಲ ಯಾವುದಿರಬಹುದು ಮತ್ತು ಅದರ ಉಗಮದ ಕಾಲ ಯಾವುದು ಎಂಬ ಪ್ರಶ್ನೆಗಳನ್ನು ಎತ್ತಿಕೊಂಡಾಗ ಅದರ ಉತ್ತರ ಅಷ್ಟು ಸುಲಭವಾಗಿಲ್ಲ. ಏಕೆಂದರೆ ಈಗಾಗಲೇ ನಾವು ಚರ್ಚಿಸಿದಂತೆ ಕೇಳಿಕೆ ಆಂಧ್ರ ಮತ್ತು ಕರ್ನಾಟಕದ ಜನಪದ ಕಥನ ಮತ್ತು ಬಯಲು ರಂಗ ಸ್ಥಳದಿಂದ ಪ್ರಭಾವ ಗೊಂಡು ರೂಪಿತವಾದುದರಿಂದ ಇದರ ಕೇಂದ್ರ ಸ್ಥಾನ ಯಾವುದಿರಬಹುದು ಎಂಬುದು ಕುತೂಹಲಕರ ಪ್ರಶ್ನೆಯೇನೋ ಸರಿ. ಆದರೆ ಈಗಿನ ಕೋಲಾರ ಜಿಲ್ಲೆಯ ಎಲ್ಲ ತಾಲ್ಲೂಕುಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಲವು ತಾಲ್ಲೂಕುಗಳು, ಆಂಧ್ರದ ಚಿತ್ತೂರು ಜಿಲ್ಲೆಯ ಕೆಲವು ತಾಲ್ಲೂಕುಗಳು, ಹಾಗೂ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಮಾತ್ರ ಈ ಕಲೆಯ ಅಸ್ತಿತ್ವ ಇದೆಯಾದ್ದರಿಂದ ಇವೆಲ್ಲಕ್ಕೆ ಕೇಂದ್ರ ಸ್ಥಾನ ಯಾವುದು ಎಂಬುದನ್ನು ಅತಿಸೂಕ್ಷ್ಮವಾದ ಕ್ಷೇತ್ರಕಾರ್ಯದಿಂದ ಊಹಿಸಲು ಸಾಧ್ಯ. ನನ್ನ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಕೋಲಾರ ಜಿಲ್ಲೆಯೇ ಇದರ ಉಗಮಸ್ಥಾನ ಎಂದು ಊಹಿಸಿದ್ದೆ. ಆದರೆ ನನ್ನ ಕ್ಷೇತ್ರಕಾರ್ಯ ವಿಸ್ತಾರಗೊಂಡಂತೆ ತಂಡದಿಂದ

ತಂಡವನ್ನು ಸಂದರ್ಶಿಸುತ್ತಾ, ಹಿರಿಯ ಕಲಾವಿದರನ್ನು ಮಾತನಾಡಿಸುತ್ತಾ ಹೋದಂತೆ ನನ್ನ ಅಭಿಪ್ರಾಯಗಳು ಬದಲಾಗುತ್ತ ಹೋದವು. ಕೆಲವು ತಂಡಗಳನ್ನು ಆಯ್ಕೆ ಮಾಡಿಕೊಂಡು ಆ ತಂಡಗಳ ಗುರುಗಳನ್ನು ಪ್ರಶ್ನಿಸುತ್ತಾ ಹೋದಾಗ ಕೇಳಿಕೆಯ ಉಗಮ ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ಕುಪ್ಪಂಗೆ ಬಂದು ನಿಂತಿತು. ಎಲ್ಲಾ ಹಿರಿಯ ಕಲಾವಿದರು ಕುಪ್ಪಂ ಕಡೆಗೆ ತಮ್ಮ ಬೆರಳು ತೋರಿಸಿದಾಗ ಕುಪ್ಪಂನಲ್ಲಿ ಅಧಿಕ ಸಂಖ್ಯೆಯ ಕೇಳಿಕೆ ಕಲಾವಿದರಿದ್ದು ಅಲ್ಲಿಂದಲೇ ಕೇಳಿಕೆ ಪ್ರಸಾರಗೊಂಡಂತೆ ಅಭಿಪ್ರಾಯಗಳು ಮೂಡಿಬಂದವು. ಇದು ನಿಜವು ಇರಬಹುದು. ಏಕೆಂದರೆ, ಕುಪ್ಪಂ, ಕರ್ನಾಟಕ, ತಮಿಳುನಾಡು, ಮತ್ತು ಆಂಧ್ರಪ್ರದೇಶಗಳ ಮೂರು ರಾಜ್ಯಗಳ ಗಡಿಗಳು ಸಂಪರ್ಕಿಸುವ ಒಂದು ಕೇಂದ್ರ ಬಿಂದು. ಬೇರೆಲ್ಲ ಗಡಿ ಪ್ರದೇಶಗಳಲ್ಲಿ ದ್ವಿಭಾಷೆಯ ಜನ ಕಂಡು ಬಂದರೆ ಕುಪ್ಪಂ ತ್ರಿಭಾಷೆಯ ಪ್ರದೇಶವಾಗಿ ಕಂಡುಬರುತ್ತದೆ. ಇಲ್ಲಿ ತೆಲುಗು, ಕನ್ನಡ ಮತ್ತು ತಮಿಳು ಮೂರು ಭಾಷೆಯ ಬಳಕೆಯೂ ಇದೆ. ಹಾಗಾಗಿ ಇದೊಂದು ವಿಶಿಷ್ಟ ಭಾಷಾ ಪ್ರದೇಶ. ಅಷ್ಟೆ ಅಲ್ಲ ಈಗಾಗಲೇ ಹೇಳಿದಂತೆ ಕೇಳಿಕೆಯ ಅಪಾರ ಪ್ರಮಾಣದ ಕಲಾವಿದರು ಕಂಡುಬರುವ ಒಂದು ಸಾಂದ್ರ ಸ್ಥಳ. ಹೀಗಾಗಿ ಸದ್ಯದಲ್ಲಿ ದೊರೆಯುವ ಆಕರಗಳ ಪ್ರಕಾರ ಕುಪ್ಪಂ ಕೇಳಿಕೆಯ ಕೇಂದ್ರ ಸ್ಥಳ ಎಂದು ಊಹಿಸಬಹುದಾಗಿದೆ. ಬಹುಶಃ ದ್ರಾವಿಡ ಭಾಷಾ ಪ್ರದೇಶಗಳು ಮತ್ತು ದ್ರಾವಿಡ ಸಂಸ್ಕೃತಿಗಳು ಒಂದಕ್ಕೊಂದು ಸಂಧಿಸುವ ಈ ವಿಶಿಷ್ಟ ಪ್ರದೇಶದ ಸಂಸ್ಕೃತಿಯನ್ನು ನೋಡಿಯೇ ಇಲ್ಲಿ ದ್ರಾವಿಡ ವಿಶ್ವವಿದ್ಯಾಲಯವನ್ನು ಸ್ಥಾಪಿಸಿರಬಹುದು ಎಂದು ಆಮೇಲೆ ತಿಳಿದುಬಂತು. ಇದು ನಮ್ಮ ದ್ರಾವಿಡ ರಂಗಭೂಮಿಯ ಕಲ್ಪನೆಗೂ ಒತ್ತು ನೀಡುತ್ತದೆ ಎಂಬುದನ್ನು ನೆನೆಯುವಾಗ ನಮ್ಮ ಊಹೆಗೂ ಮತ್ತು ಕಲ್ಪನೆಗೂ ಸಂಬಂಧ ಕಲ್ಪಿಸುವ ವಿಷಯವೇ ಆಯಿತೆಂದು ಸಂತೋಷವೇ ಆಯಿತು.

## ಇ. ಕೇಳಿಕೆಯಲ್ಲಿ ಭಾಗವಹಿಸುವ ಜನವರ್ಗಗಳ ವಿವರ

ಈ ಹಿಂದೆಯೇ ಪ್ರಸ್ತಾಪಿಸಿರುವಂತೆ ಕೋಲಾರ ಜಿಲ್ಲೆ ಪ್ರಮುಖವಾಗಿ ಕೃಷಿ ಪ್ರಧಾನವಾದ ಜಿಲ್ಲೆ. ಕೃಷಿಕರು ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ಹಾಗೆಯೇ ದಲಿತರು ಕೂಡ ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ಕೋಲಾರ ಜಿಲ್ಲೆಯ ಮತ್ತೊಂದು ವೈಶಿಷ್ಟ್ಯವೆಂದರೆ ಅನೇಕ ಬಗೆಯ ಅಲೆಮಾರಿ ಮತ್ತು ಬುಡಕಟ್ಟು ಜನರು ವಾಸ ಮಾಡುತ್ತಿರುವುದು. ಕೃಷಿಯನ್ನು ಆಶ್ರಯಿಸಿಕೊಂಡು ಬದುಕುವ ಕುಶಲಕರ್ಮಿ ಜನವರ್ಗಗಳು ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ಹೀಗೆ ಮೇಲುವರ್ಗ, ಕೆಳವರ್ಗ, ದಲಿತವರ್ಗ, ಹಿಂದುಳಿದ ವರ್ಗ ಮತ್ತು ಬುಡಕಟ್ಟು ಜನವರ್ಗ ಹೀಗೆ ಎಲ್ಲ ಸ್ತರದ

ISSN : 3048-7137

ಜನಾಂಗಿಕ ಹಿನ್ನೆಲೆಯು ಕೋಲಾರ ಜಿಲ್ಲೆಗೆ ಇದೆ. ಬ್ರಾಹ್ಮಣರು, ವೈಶ್ಯರು, ಶೂದ್ರರು ಮತ್ತು ಅಸ್ಪೃಶ್ಯರವರೆಗೆ ಸಾಮಾಜಿಕ ಶ್ರೇಣೀಕರಣವು ಪರಂಪರೆಯಿಂದ ಬಂದಂತೆ ಹಾಗೆ ಇದೆ.

ಇಷ್ಟೆಲ್ಲ ವೈವಿಧ್ಯಮಯ ಜನವರ್ಗಗಳು ಇರುವ ಕೋಲಾರ ಜಿಲ್ಲೆಯಲ್ಲಿ ಎಲ್ಲರೂ ಕಲೆಯನ್ನು ಪ್ರೋತ್ಸಾಹಿಸುತ್ತಾರಾದರೂ ನೇರವಾಗಿ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಯಾರು ಎಂಬುದನ್ನು ನಾವು ಪರ್ಯಾವಲೋಚಿಸ ಬೇಕಾಗಿದೆ. ಈ ಹಿಂದೆಯೇ ಪ್ರಸ್ತಾಪಿಸಿರುವಂತೆ ಕೋಲಾರ ಜಿಲ್ಲೆಯಲ್ಲಿ ಹತ್ತಾರು ಬಗೆಯ ವೈವಿಧ್ಯಮಯ ಜನಪದ ಕಲೆಗಳಿವೆ. ಮೂಡಲಪಾಯ ಯಕ್ಷಗಾನ, ತೊಗಲು ಗೊಂಬೆಯಾಟ, ಕೇಳಿಕೆ ಮುಂತಾದ ಜನಪದ ರಂಗಪ್ರಕಾರಗಳಿವೆ. ಆಧುನಿಕ ಹವ್ಯಾಸಿ ಕಂಪನಿ ನಾಟಕಗಳ ತಂಡಗಳು ಇವೆ. ಕರ್ನಾಟಕ ಸಂಗೀತ, ಭರತನಾಟ್ಯ, ಸುಗಮ ಸಂಗೀತ ಮುಂತಾದ ಕಲಾ ತಂಡಗಳು ಅಲ್ಲಲ್ಲಿ ಕಾಣಸಿಗುತ್ತವೆ. ಇಷ್ಟೆಲ್ಲ ಕಲಾಪ್ರಕಾರಗಳ ನಡುವೆ ಕೇಳಿಕೆಯ ರಂಗ ಪ್ರಕಾರದ ಸ್ಥಾನಮಾನವೇನು ಮತ್ತು ಅದನ್ನು ಯಾರು ಪ್ರದರ್ಶಿಸುತ್ತಾರೆ ಎಂಬುದನ್ನು ಅವಲೋಕಿಸಬೇಕಾದುದು ಬೆಳವಣಿಗೆಯ ದೃಷ್ಟಿಯಿಂದ ಅವಶ್ಯಕವಾಗಿದೆ.

ನನ್ನ ಅನುಭವದಲ್ಲಿ ಹೇಳುವುದಾದರೆ ಕಂಪನಿ ನಾಟಕಗಳ ಸ್ವರೂಪದ ಹವ್ಯಾಸಿ ನಾಟಕಗಳನ್ನು ಬಿಟ್ಟರೆ ನಂತರದ ಸ್ಥಾನ ಕೇಳಿಕೆಯದೇ. ಒಂದು ನೂರು ವರ್ಷಗಳ ಹಿಂದಕ್ಕೆ ಹೋದರೆ ಅಂದರೆ ಈ ಕಂಪನಿ ನಾಟಕಗಳ ಪ್ರಭಾವಕ್ಕಿಂತ ಮೊದಲು ಎಲ್ಲೆಲ್ಲಿಯೂ ಕೇಳಿಕೆಯ ಪ್ರಭಾವವಿತ್ತೆಂದು ಊಹಿಸಬಹುದು. ಕೋಲಾರ ಜಿಲ್ಲೆಗೆ ಅಂಟಿಕೊಂಡಿರುವ ಚಿತ್ರದುರ್ಗ, ತುಮಕೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಹೆಚ್ಚು ಪ್ರಭಾವಯುತವಾಗಿದ್ದ ಬಯಲಾಟಗಳ ಪರಂಪರೆ ಕೋಲಾರದಲ್ಲಿಯೂ ಇತ್ತು. ಅದರಲ್ಲಿಯೂ ಕರಿಭಂಟನ ಕಾಳಗ, ಸುಂದರಕಾಂಡ ರಾಮಾಯಣ ಹಾಗೂ ಕೃಷ್ಣ ಲೀಲೆ ಪ್ರಸಂಗಗಳು ಬಹು ಜನಪ್ರಿಯವಾಗಿದ್ದವು ಎಂದು ತಿಳಿದು ಬರುತ್ತದೆ. ಇವುಗಳ ನಡುವೆಯೇ ಕೇಳಿಕೆ ಸಮಸ್ತ ಜನವರ್ಗಗಳ ಅಭಿಮಾನದ ಕಲೆಯಾಗಿ ಬೆಳೆದುಬಂದದ್ದು ಆಶ್ಚರ್ಯವನ್ನುಂಟುಮಾಡುತ್ತದೆ. ನಾವು ಈಗಾಗಲೇ ಊಹಿಸಿದಂತೆ ಕೇಳಿಕೆ ಅಲೆಮಾರಿ ಜನವರ್ಗಗಳಿಂದ ಸೃಷ್ಟಿಗೊಂಡು ಆಂಧ್ರದ ವೀದಿ ನಾಟಕ, ಕರ್ನಾಟಕದ ಬಯಲಾಟ ಹಾಗೂ ಈ ಎರಡು ರಾಜ್ಯಗಳ ಕಥನ ಸಂಪ್ರದಾಯ ಗಳಿಂದ ಅನೇಕ ಅಂಶಗಳನ್ನು ಎರವಲು ಪಡೆದು ಬೆಳೆಯಿತಾದರೂ ಅದರ ಮುಂದಿನ ಹಂತಗಳಲ್ಲಿ ಸರ್ವಜನ ಮನ್ನಣೆ ಪಡೆದದ್ದು ಅದರ ಖ್ಯಾತಿಗೆ ಸಾಕ್ಷಿಯಾಗಿದೆ.

## ಆಕರ ಗ್ರಂಥಗಳು


1. ನಾರಾಯಣಸ್ವಾಮಿ ವೇಮಗಲ್.ಡಿ ಕೇಳಿಕೆ: ಒಂದು ಅಧ್ಯಯನ, ಸಿ.ವಿ.ಜಿ. ಪ್ರಕಾಶನ ಬೆಂಗಳೂರು, 2005
2. ಚಂದ್ರಶೇಖರ ಕಂಬಾರ, ಉತ್ತರ ಕರ್ನಾಟಕದ ಜನಪದ ರಂಗಭೂಮಿ, ಮನ್ವಂತರ ಪ್ರಕಾಶನ, ಧಾರವಾಡ, 1965
3. ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2011
4. ನಾಯಕ್ ಎನ್.ಆರ್., ಕನ್ನಡ ಬಯಲಾಟ ಪರಂಪರೆ, ಜಾನಪದ ಅಕಾಡೆಮಿ, ಬೆಂಗಳುರು, 1982
5. ಪುಟ್ಟಸ್ವಾಮಯ್ಯ ಬಿ. ಕನ್ನಡ ರಂಗಭೂಮಿ ನಡೆದುಬಂದ ದಾರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 1983
6. ಶಂಕರ ಕೆ. ರಂಗಭೂಮಿ, ಕಾವ್ಯಾಲಯ ಪ್ರಕಾಶನ ಮೈಸೂರು, 1955